**ದಿನಾಂಕ: 18-02-2021 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 32ನೇ ಸಭೆಯ ನಡವಳಿಗಳು**

**: ಅಧ್ಯಕ್ಷತೆ :**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್**

**ಸನ್ಮಾನ್ಯ ಕಾರ್ಮಿಕ ಸಚಿವರು**

**ಹಾಗೂ**

**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.**

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿಗಳು:- (ಸದಸ್ಯರುಗಳು)**

1. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದೂ ಮಜ್ದೂರ್ ಸಭಾ, ಬೆಂಗಳೂರು
2. ಶ್ರೀ ಎಸ್. ಎಸ್ ಪ್ರಕಾಸಂ, ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು
3. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
4. ಶ್ರೀ ಚಿಂತಾಮಣಿ, ಅಧ್ಯಕ್ಷರ ಪರವಾಗಿ, ಭಾರತೀಯ ಮಜ್ದೂರ್ ಸಂಘ, ಬೆಂಗಳೂರು

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಮಾಲೀಕರ ಪರ ಪ್ರತಿನಿಧಿಗಳು:-(ಸದಸ್ಯರುಗಳು)**

1. ಶ್ರೀ ರವೀಂದ್ರ, ಅಧ್ಯಕ್ಷರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು

**ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮನಿರ್ದೇಶಿತ ಸದಸ್ಯರು:**

1. ಡಾ.ರಾಜಕುಮಾರ್ ಖತ್ರಿ., ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಕಾರ್ಯದರ್ಶಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು
3. ಶ್ರೀ ರಾಮದುರ್ಗಾ ಪ್ರಸಾದ್, ಸಹಾಯಕ ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು
4. ಶ್ರೀ ಎಲಿಷ ಆಂಡ್ರೂಸ್, ಉಪ ಕಾರ್ಯದರ್ಶಿ-ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು (ಇವರ ಪರವಾಗಿ).
5. ಶ್ರೀ ಕೆ. ಯಾಲಕ್ಕಿಗೌಡ, ನಿರ್ದೇಶಕರು ಅಭಿವೃದ್ಧಿ -ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು (ಇವರ ಪರವಾಗಿ)

**ವಿಶೇಷ ಆಹ್ವಾನಿತ ಅಧಿಕಾರಿಗಳು**

1. ಶ್ರೀ ಅಕ್ರಂ ಪಾಷ, ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬೆಂಗಳೂರು
2. ಶ್ರೀ ಶಿವಶಂಕರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆಐಎಡಿಬಿ ಬೆಂಗಳೂರು

**ಗೈರು ಹಾಜರಿದ್ದವರು:-**

1. ಅಧ್ಯಕ್ಷರು, CREDAI, ಬೆಂಗಳೂರು.
2. ಅಧ್ಯಕ್ಷರು, Construction Federation of India, New Dehli.
3. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

******

ಮಂಡಳಿಯ ಕಾರ್ಯದರ್ಶಿಯವರು, ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರು, ಸದಸ್ಯರನ್ನು ಹಾಗೂ ವಿಶೇಷ ಆಹ್ವಾನಿತರರನ್ನು ಸ್ವಾಗತಿಸಿ ಮಂಡಳಿಯ 32ನೇ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರನ್ನು ಕೋರಿದರು.

ಸಭೆಯ ವಿಷಯ ಸೂಚಿ ಅನ್ವಯ ಚರ್ಚೆಯನ್ನು ಪ್ರಾರಂಭಿಸುವ ಮೊದಲು ಮಂಡಳಿಗೆ ಕೆಐಎಡಿಬಿ ವತಿಯಿಂದ ಮಂಜೂರಾಗಿರುವ ಜಮೀನು / ನಿವೇಶನಕ್ಕೆ ಸಂಬಂಧಿಸಿದ ಚರ್ಚೆಯನ್ನು ಪ್ರಾರಂಭಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು. ಈ ಹಿನ್ನಲೆಯಲ್ಲಿ ಮಂಡಳಿಯ ಕಾರ್ಯದರ್ಶಿಗಳು ಕೆಐಎಡಿಬಿ ಯಿಂದ ಮಂಡಳಿಗೆ ಮಂಜೂರಾಗಿರುವ 11 ನಿವೇಶನಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಹಾಗೂ ಮಂಡಳಿಯಿಂದ ಪಾವತಿಸಿದ ಮೊತ್ತದ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು. ಇದಕ್ಕೆ ಉತ್ತರವಾಗಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಕೆಐಎಡಿಬಿ ಇವರು ನಿವೇಶನವಾರು ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಿದರು.

1. **ಮೈಸೂರು:** ಮೈಸೂರಿನ ತಾಂಡ್ಯಾ ಕೈಗಾರಿಕಾ ಪ್ರದೇಶದಲ್ಲಿ ಮಂಡಳಿಗೆ ಸೂಕ್ತವಾದ ನಿವೇಶನವು ಲಭ್ಯವಿಲ್ಲದ ಕಾರಣ ಇದಕ್ಕೆ ಬದಲಾಗಿ ಸಮೀಪದಲ್ಲೇ ಇರುವ ಅಡಕನಹಳ್ಳಿಯಲ್ಲಿ ನಿವೇಶನವನ್ನು ಹಂಚಿಕೆ ಮಾಡುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ಸಭೆಯು ಸಮ್ಮತಿಯನ್ನು ಸೂಚಿಸಿರುತ್ತದೆ.
2. **ಬೆಳಗಾವಿ:** ಬೆಳಗಾವಿ ಜಿಲ್ಲೆಯ ಕಿತ್ತೂರು ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿ ಯಿಂದ 10 ಎಕರೆ ನಿವೇಶನವು ಮಂಡಳಿಯ ಹೆಸರಿನಲ್ಲಿ ಹಂಚಿಕೆಯಾಗಿದ್ದು, ಅದರ ಸ್ವಾಧೀನ ಪತ್ರವನ್ನು ನೀಡಲಾಗುವುದೆಂದು ತಿಳಿಸಿರುತ್ತಾರೆ.
3. ಬೆಳಗಾವಿ ಹಾಗೂ ಬೆಂಗಳೂರಿನ ದೊಡ್ಡಬಳ್ಳಾಪುರದ ಓಬದೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಮಂಜೂರಾಗಿರುವ ನಿವೇಶನಗಳನ್ನು ಈಗಾಗಲೇ ಮಂಡಳಿಯ ಹೆಸರಿಗೆ ನೋಂದಾಯಿಸಲಾಗಿರುತ್ತದೆ ಎಂದು ಸಭೆಗೆ ಮಾನ್ಯ ಕಾರ್ಯದರ್ಶಿಗಳು ಮಾಹಿತಿಯನ್ನು ನೀಡಿದರು. ಉಳಿದಂತೆ ಚಾಮರಾಜನಗರ, ಬೆಳಗಾವಿಯ ಕಿತ್ತೂರು, ಹಾಸನ, ಕಲಬುರಗಿಯ ನಂದೂರು ಹಾಗೂ ಶಿವಮೊಗ್ಗದಲ್ಲಿ ಮಂಜೂರಾಗಿರುವ ಜಮೀನಿಗೆ ಸಂಬಂಧಿಸಿದಂತೆ ನೋಂದಣಿ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. ಈ ಹಂತದಲ್ಲಿ ಮಂಡಳಿಯ ಕಾರ್ಯದರ್ಶಿಗಳು ಮಾತನಾಡಿ, ಕೆಲವು ಜಮೀನಿಗೆ ಸಂಬಂಧಿಸಿದಂತೆ ಹೆಚ್ಚುವರಿ ಮೊತ್ತವನ್ನು ಬಡ್ಡಿ ಸಹಿತ ಪಾವತಿಸಲು ಕೆಐಎಡಿಬಿಯ ವಿವಿಧ ಅಭಿವೃದ್ಧಿ ಅಧಿಕಾರಿಗಳಿಂದ ಪತ್ರ ಬರುತ್ತಿರುವುದನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಗಮನಕ್ಕೆ ತಂದಿರುತ್ತಾರೆ ಹಾಗೂ ಮಂಡಳಿಯು ಕೈಬಿಡಲು ಉದ್ದೇಶಿಸಿರುವ ನಿವೇಶನಗಳಾದ ಕಾರವಾರ, ಕಲಬುರಗಿಯ ಕಪನೂರಲ್ಲಿ ಇರುವ ನಿವೇಶನಗಳಿಗೆ ಸಂಬಂಧಿಸಿದಂತೆ ಮಂಡಳಿಯು ಪಾವತಿಸಿರುವ ಮೊತ್ತವು ಕೆಐಎಡಿಬಿ ವಶದಲ್ಲಿರುತ್ತದೆ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಪ್ರತ್ಯುತ್ತರವಾಗಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಎರಡು ಸಂಸ್ಥೆಗಳು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವುದರಿಂದ ಬಡ್ಡಿಯನ್ನು ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು

ತಿಳಿಸಿರುತ್ತಾರೆ. ಇದಲ್ಲದೇ, ಕೆಐಎಡಿಬಿಗೆ ಬರಬೇಕಾದ ನಿವೇಶನದ ಪರಿಷ್ಕೃತ ದರಗಳನ್ವಯ ವ್ಯತ್ಯಾಸದ ಮೊತ್ತ ಹಾಗೂ ಮಂಡಳಿಗೆ ಹಿಂದಿರುಗಿಸಬೇಕಾದ ಮೊತ್ತಕ್ಕೆ ಸಂಬಂಧಿಸಿದಂತೆ Re-concilation statement ಸಿದ್ಧಪಡಿಸಿ ಬೇರೆ ನಿವೇಶನಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವುದಾಗಿ ಹಾಗೂ ಹೆಚ್ಚುವರಿಯಾಗಿ ಉಳಿಕೆಯಾದಲ್ಲಿ ಮಂಡಳಿಗೆ ಹಿಂದಿರುಗಿಸುವುದಾಗಿ ತಿಳಿಸಿದರು.

4. **ಹುಬ್ಬಳ್ಳಿ:-**ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಯಾದ 10 ಎಕರೆ ನಿವೇಶನದ ಬದಲಾಗಿ ಮಮ್ಮಿಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ 10 ಎಕರೆ ನಿವೇಶನವನ್ನು ನೀಡಬಹುದೆಂದು ಕೆಐಎಡಿಬಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ತಿಳಿಸಿದರು. ಈ ನಿವೇಶನವನ್ನು ಪಡೆದುಕೊಳ್ಳಲು ಮಾನ್ಯ ಅಧ್ಯಕ್ಷರು ಸೂಚಿಸಿರುವ ಹಿನ್ನಲೆಯಲ್ಲಿ ಗಾಮನಗಟ್ಟಿಯ ನಿವೇಶನದ ಬದಲಿಗೆ ಧಾರವಾಡ ಸಮೀಪದಲ್ಲೇ ಇರುವ ಮಮ್ಮಿಗಟ್ಟಿಯಲ್ಲಿ ನಿವೇಶನವನ್ನು ಪಡೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

5. **ಹಾಸನ:** ಹಾಸನ ಜಿಲ್ಲೆಯ ಇಂಡಸ್ಟ್ರೀಯಲ್ ಗ್ರೋಥ್ ಸೆಂಟರ್ ಏರಿಯಾದಲ್ಲಿ ಮಾನ್ಯ ಕಾರ್ಮಿಕ ಸಚಿವರು ಖುದ್ದಾಗಿ ಸ್ಥಳ ಪರಿಶೀಲನೆ ನಡೆಸಿರುವುದಾಗಿ ತಿಳಿಸಿ, ನಾಲಾ ನೀರು ಹರಿಯುವುದರಿಂದ ಈ ನಿವೇಶನದ ಬದಲಾಗಿ ಬೇರೆ ನಿವೇಶನವನ್ನು ನೀಡುವಂತೆ ಅಥವಾ ಬದಲಿ ನಿವೇಶನದ ಬಗ್ಗೆ ತೀರ್ಮಾನವಾಗದಿದ್ದಲ್ಲಿ ಮಂಡಳಿಗೆ ಈಗಾಗಲೇ ಹಂಚಿಕೆಯಾಗಿರುವ ಜಮೀನಿನಲ್ಲಿ ನಾಲಾ ಹಾಗೂ ಕೆರೆ-ಕೋಡಿ ಇತ್ಯಾದಿಗಳ ವಿಸ್ತೀರ್ಣವನ್ನು ಹೊರತುಪಡಿಸಿ, ಉಳಿಕೆ ಜಮೀನನ್ನು ಮಂಡಳಿಗೆ ನೀಡಬೇಕಾಗಿ ತಿಳಿಸಿದರು. ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇದರ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

6. **ಕಾರವಾರ:** ಕಾರವಾರದಲ್ಲಿ ಪ್ರಸ್ತುತ ನಿವೇಶನ ಲಭ್ಯವಿಲ್ಲದ ಕಾರಣ ಈಗಾಗಲೇ ಮಂಡಳಿಯಿಂದ ನಿವೇಶನಕ್ಕಾಗಿ ಮೊತ್ತವು ಪಾವತಿಯಾಗಿರುವುದರಿಂದ ಮುಂದಿನ ದಿನಗಳಲ್ಲಿ ಲಭ್ಯವಾಗುವ ನಿವೇಶನವನ್ನು ಹಂಚಿಕೆ ಮಾಡಲಾಗುವುದೆಂದು ಕೆಐಎಡಿಬಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ತಿಳಿಸಿದರು.

7. **ದೊಡ್ಡಬಳ್ಳಾಪುರ:** ದೊಡ್ಡಬಳ್ಳಾಪುರದ ಓಬದೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಯಾಗಿರುವ ನಿವೇಶನದ ಕುರಿತು ನ್ಯಾಯಾಲಯದಲ್ಲಿ ವ್ಯಾಜ್ಯ ಇದ್ದು ಇನ್ನು 2-3 ತಿಂಗಳಿನಲ್ಲಿ ವ್ಯಾಜ್ಯವು ಮುಕ್ತಾಯವಾಗುವ ಸಂಭವವಿರುತ್ತದೆ ಎಂದು ಕೆಐಎಡಿಬಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ತಿಳಿಸಿದರು. ಈ ಕುರಿತು ಕೆಐಎಡಿಬಿ ಯಿಂದ ಆದ್ಯತೆ ಮೇರೆಗೆ ಕ್ರಮವಹಿಸಿ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಯಾಗಿರುವ ಜಮೀನಿನಲ್ಲಿ ಕಾರ್ಮಿಕ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ಸಹಕಾರ ನೀಡುವುದಾಗಿ ತಿಳಿಸಿದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆಐಎಡಿಬಿ, ಬೆಂಗಳೂರು ಇವರು ನಿವೇಶನಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಭೆಗೆ ಸಲ್ಲಿಸಿದಕ್ಕೆ ಅಧ್ಯಕ್ಷರು ಹಾಗೂ ಸಚಿವರು ಸದರಿಯವರಿಗೆ ಸಭೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

## ವಿಷಯ ಸೂಚಿ:01

**ದಿನಾಂಕ:19-11-2020 ರಂದು ನಡೆದ 31ನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ಸ್ಥಿರೀಕರಿಸುವುದು**

ದಿನಾಂಕ:19-11-2020 ರಂದು ನಡೆದ 31ನೇ ಸಭೆಯ ನಡವಳಿಗಳಿಗೆ ಕೈಗೊಳ್ಳಲಾದ ಕ್ರಮದ ಅನುಪಾಲನಾ ವರದಿಯನ್ನು ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ಮಂಡಿಸಿದ್ದು ಅದನ್ನು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಹಾಗೂ 31 ನೇ ಸಭೆಯಲ್ಲಿ ತಿಳಿಸಿದಂತೆ 30 ನೇ ಸಭೆಯ ನಡವಳಿಗಳ ಮೇಲೆ ಕೈಗೊಳ್ಳಲಾದ ವಿವರವಾದ ಅನುಪಾಲನಾ ವರದಿಯನ್ನು ಮಂಡಳಿ ಕಾರ್ಯದರ್ಶಿಗಳು ಸಭೆಗೆ ಮಂಡಿಸಿದರು. ಅದನ್ನು ಕೂಡಾ ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

## ವಿಷಯ ಸಂಖ್ಯೆ-02

**ಮಂಡಳಿಯ 2021-22 ನೇ ಸಾಲಿನ ಆಯವ್ಯಯವನ್ನು ಮಂಡಿಸುವ ಕುರಿತು**

ಮಂಡಳಿಯ ಕಾರ್ಯದರ್ಶಿಯವರು ಮಾತನಾಡುತ್ತಾ, ಮಂಡಳಿಯ 2021-22 ನೇ ಸಾಲಿನ ಆಯವ್ಯಯದ ಕರಡನ್ನು ತಯಾರಿಸಿದ್ದು, ಅದರಲ್ಲಿ 2021-22ನೇ ಸಾಲಿನಲ್ಲಿ ರೂ.2013.68 ಕೋಟಿಗಳಷ್ಟು ಆದಾಯವನ್ನು ಮತ್ತು ರೂ.2668.90 ಕೋಟಿಗಳಷ್ಟು ಖರ್ಚು ವೆಚ್ಚಗಳನ್ನು ನಿರೀಕ್ಷಿಸಲಾಗಿದೆ ಎಂದು ತಿಳಿಸುತ್ತಾ 2020-21ನೇ ಸಾಲಿನ ಕೆಲವು ಯೋಜನೆಗಳನ್ನು ಕೈಬಿಟ್ಟಿರುವುದಾಗಿಯು ಹಾಗೂ ಕೆಲವು ಯೋಜನೆಗಳಾದ 1) Laptop for Higher education 2) Students essential Kits 3) Full free reimbursement for professional courses of dependents of construction workers 4) Preventive Health Care Training and Check-up 5) Mobile Clinic 6) Nutritional Kits & Immunity kits (7) Software development (8) Recognition and Prior Learning of Training with Toolkit (9) Construction of Compound walls to Board sites at Districts ಗಳನ್ನು ಮುಂದುವರೆಸಲಾಗಿದೆ. ಹೀಗೆ ಇನ್ನೂ ಅನೇಕ ಯೋಜನೆಗಳನ್ನು ರೂಪಿಸಿರುವುದಾಗಿಯೂ ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಆಯವ್ಯಯದ ಅವಶ್ಯಕತೆಯಿರುವುದಾಗಿ ಮಂಡಳಿಯ ಕಾರ್ಯದರ್ಶಿಯವರು ಸಭೆಗೆ ಮಂಡಿಸಿದರು. ಆಗ ಮಂಡಳಿಯ ಅಧ್ಯಕ್ಷರು ಮಾತನಾಡಿ ಶಿಶು ಪಾಲನಾ ಕೇಂದ್ರಗಳ ಸ್ಥಾಪನೆಗೆ, Transit Accomodation ಗಳ ನಿರ್ಮಾಣಕ್ಕೆ, ಮೊಬೈಲ್ ಕ್ಲಿನಿಕ್‌ಗಳಿಗೆ ಜಿಲ್ಲೆಗಳಲ್ಲಿರುವ ಮಂಡಳಿಯ ನಿವೇಶನಗಳ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಾಣಕ್ಕಾಗಿ ಹೆಚ್ಚುವರಿ ಅನುದಾನ ಕಾಯ್ದಿರಿಸುವಂತೆ ತಿಳಿಸಿದರು. ಅದಕ್ಕೆ ಸರ್ವ ಸದಸ್ಯರುಗಳು ಸಹ ಮತ ವ್ಯಕ್ತಪಡಿಸಿದರು.

**ತೀರ್ಮಾನ:**

2021-22ನೇ ಸಾಲಿನ ಆಯವ್ಯಯದ ಕುರಿತು ಸುಧೀರ್ಘವಾಗಿ ಚರ್ಚಿಸಿದ ನಂತರ 2021-22ನೇ ಸಾಲಿನಲ್ಲಿ ರೂ.2013.68 ಕೋಟಿಗಳಷ್ಟು ಆದಾಯವನ್ನು ಮತ್ತು ರೂ.2668.90 ಕೋಟಿಗಳಷ್ಟು ಖರ್ಚು ವೆಚ್ಚಗಳನ್ನು ನಿರೀಕ್ಷಿಸಿ ಸಭೆಯು 2021-22ನೇ ಸಾಲಿನ ಆಯವ್ಯಯವನ್ನು ಸರ್ವಾನುಮತದಿಂದ ಅನುಮೋದನೆ ನೀಡಿತು.

ಮುಂದುವರೆದು, 2020-21ನೇ ಸಾಲಿನ ಆಯವ್ಯಯದಲ್ಲಿ ಅನುಮೋದನೆಯಾದ ಯೋಜನೆಗಳನ್ನು ಕೋವಿಡ್-19 ಕಾರಣದಿಂದಾಗಿ ಅನುಷ್ಠಾನಗೊಳಸಲು ವಿಳಂಭವಾಗಿದ್ದು ಸದರಿ ಎಲ್ಲಾ ಅನುಮೋದಿತ ಯೋಜನೆಗಳನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಮಂಡಳಿ ವತಿಯಿಂದ ಅನುಷ್ಠಾನಗೊಳಸಲು ಸಭೆಯಲ್ಲಿ ಒಪ್ಪಿ ಸರ್ವಾನುಮತದಿಂದ ಅನುಮೋದಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ-03**

**ಮಾನ್ಯ ಕಾರ್ಮಿಕ ಸಚಿವರು ಮಂಡಳಿಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಒಂದು ವರ್ಷ ಪೂರೈಸಿದ್ದು, ಈ ಅವಧಿಯಲ್ಲಿ ಮಂಡಳಿಯ ಸಾಧನೆಗಳು ಹಾಗೂ ಮಂಡಳಿಯು ಫಲಾನುಭವಿಗಳಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳ ಕುರಿತು ದಿನಪತ್ರಿಕೆಗಳಲ್ಲಿ ಮಾಹಿತಿಯನ್ನು ಪ್ರಕಟಿಸಲು ಅನುಮೋದಿಸುವ ಬಗ್ಗೆ**

ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಅಧಿಕಾರ ವಹಿಸಿಕೊಂಡ ನಂತರದ 1 ವರ್ಷದ ಸಾಧನೆಗಳು, ಕಾರ್ಮಿಕ ಇಲಾಖಾ ವತಿಯಿಂದ ಕೈಗೊಂಡ ಕಾರ್ಯಕ್ರಮಗಳು, ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ತೆಗೆದುಕೊಂಡ ಕ್ರಮಗಳು, ಮಂಡಳಿಯ ವತಿಯಿಂದ ನಿರ್ಮಾಣ ಕಾರ್ಮಿಕರಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳ ಮಾಹಿತಿಯನ್ನು ಪತ್ರಿಕಾ ಪ್ರಕಟಣೆ ಹಾಗೂ ಎಡಿಟೋರಿಯಲ್ ಕಾಲಂ ಮೂಲಕ ಪ್ರಕಟಿಸುವ ವಿಷಯವನ್ನು ಅನುಮೋದನೆಗಾಗಿ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸಂಖ್ಯೆ-04**

**2021ನೇ ಸಾಲಿಗೆ ಎಲ್ಲಾ ಗೌರವಾನ್ವಿತ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಮಂಡಳಿಯ ಸದಸ್ಯರುಗಳಿಗೆ ಮತ್ತು ವಿವಿಧ ಕಾರ್ಮಿಕ ಸಂಘ ಸಂಸ್ಥೆಗಳಿಗೆ ಮಂಡಳಿ ವತಿಯಿಂದ ಹಂಚಿಕೆ ಮಾಡಲು ಎಮ್.ಸಿ &ಎ ಸಂಸ್ಥೆ ಮೂಲಕ ಮುದ್ರಿಸಲಾದ ವಾರ್ಷಿಕ ಕ್ಯಾಲಂಡರ್‌ಗಳು, ಬುಕ್‌ಲೆಟ್‌ಗಳು ಹಾಗೂ ಹೊಸ ವರ್ಷದ Greeting ಕಾರ್ಡ್‌ಗಾಗಿ ತಗುಲಿದ ಅಂದಾಜು ಮೊತ್ತ ರೂ.77,18,178/- ಗಳಿಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು**

ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ಕಾರ್ಮಿಕ ಇಲಾಖೆಯಿಂದ ಕೈಗೊಂಡ ಕ್ರಮಗಳು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಾಗೂ ಕಾರ್ಮಿಕ ಸಚಿವರು ಅಧಿಕಾರ ವಹಿಸಿಕೊಂಡ ನಂತರ ಇಲಾಖೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಳಗೊಂಡ ವರ್ಣಮಯ ಕಿರು ಹೊತ್ತಿಗೆಯನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಸಿದ್ಧಪಡಿಸಿ ರೂ. 49,50,400/- ವೆಚ್ಚದಲ್ಲಿ 20,000 ಕಿರು ಹೊತ್ತಿಗೆಗಳನ್ನು ಮೆ॥ ಎಂ.ಸಿ ಅಂಡ್ ಎ ಸಂಸ್ಥೆಯ ವತಿಯಿಂದ ಮುದ್ರಿಸಿ ಸಾರ್ವಜನಿಕರಿಗೆ, ಜನಪ್ರತಿನಿಧಿಗಳಿಗೆ ಹಾಗೂ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ನಿರ್ಮಾಣ ಕಾರ್ಮಿಕರಿಗೆ ಮಂಡಳಿಯ ವತಿಯಿಂದ ಒದಗಿಸಲಾಗುತ್ತಿರುವ ಸೌಲಭ್ಯಗಳು, ಫಲಾನುಭವಿಯಾಗಿ ನೋಂದಣಿಯಾಗಲು ಬೇಕಾದ ಅರ್ಹತೆ ಮತ್ತು ವಿಧಾನಗಳ ಮಾಹಿತಿಗಳನ್ನೊಳಗೊಂಡ 1,02,000 ಕ್ಯಾಲೆಂಡರ್‌ಗಳನ್ನು ರೂ.49,98,000/= ವೆಚ್ಚದಲ್ಲಿ ಮುದ್ರಿಸಿ ಜನ ಪ್ರತಿನಿಧಿಗಳು, ಮಂಡಳಿಯ ಸದಸ್ಯರು, ಕಾರ್ಮಿಕ ಇಲಾಖಾ ಅಧಿಕಾರಿಗಳು ಮತ್ತು ಕಛೇರಿಗಳಿಗೆ ಸರಬರಾಜು ಮಾಡಲು ಮೆ॥ ಎಂ.ಸಿ ಅಂಡ್ ಎ ಸಂಸ್ಥೆಯವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ.

2021ನೇ ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಮೆ: ಎಂ.ಸಿ ಅಂಡ್ ಎ ಸಂಸ್ಥೆಯ ಮೂಲಕ ರೂ.2,44,978/- ವೆಚ್ಚದಲ್ಲಿ 5000 ಶುಭಾಶಯ ಪತ್ರ (ಗ್ರೀಟಿಂಗ್ಸ್)ಗಳನ್ನು ವಿನ್ಯಾಸಗೊಳಿಸಿ, ಮುದ್ರಿಸಿ ಸರಬರಾಜು ಮಾಡಲಾಗಿದೆ.ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಲಾಯಿತು. ಮುಂದುವರೆದು 2020-2021 ನೇ ಸಾಲಿಗೆ ಐಇಸಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಂಡಳಿಯ ಆಯವ್ಯಯದಲ್ಲಿ ರೂ. 10.00 ಕೋಟಿ ಮೊತ್ತವನ್ನು ಬಳಕೆ ಮಾಡಲು ಅವಕಾಶ ಕಲ್ಪಿಸಲಾಗಿತ್ತು, ಆದರೆ ನೋಂದಾಯಿತ ಕಾರ್ಮಿಕರಿಗೆ ಮಂಡಳಿಯಿಂದ ನೀಡುವ ಸೌಲಭ್ಯಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವ ಅವಶ್ಯಕತೆಯಿರುವುದರಿಂದ 2020-21 ನೇ ಸಾಲಿನಲ್ಲಿ ಅನುಮೋದಿಸಿದ ಮಂಡಳಿಯ ಬಜೆಟ್‌ನಲ್ಲಿ ಉಳಿಕೆಯಾಗುವ ಮೊತ್ತದಲ್ಲಿ ರೂ.5.00 ಕೋಟಿ ಮೊತ್ತವನ್ನು ಹೆಚ್ಚುವರಿಯಾಗಿ ಐಇಸಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಳಕೆ ಮಾಡಿಕೊಳ್ಳಲು ಹಾಗೂ ಸದರಿ ಮೊತ್ತದಲ್ಲಿ ಎಲ್ಲಾ ಕಾರ್ಮಿಕ ಅಧಿಕಾರಿಗಳು/ನಿರೀಕ್ಷಕರುಗಳ ಕಛೇರಿಗಳಿಗೆ ಮಂಡಳಿಯ ಯೋಜನೆಗಳನ್ನು ಸಾರ್ವಜನಿಕರಿಗೆ ಪ್ರಚಾರಪಡಿಸಲು ಹಾಗೂ ಸದರಿ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಲು ಅನುಕೂಲವಾಗುವಂತೆ ಮೆ॥ ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಟಿ.ವಿ ಸೆಟ್ ಮತ್ತು ಅಗತ್ಯ ತಾಂತ್ರಿಕ ಸಂಪರ್ಕ ಒದಗಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು, ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ಕಾರ್ಮಿಕ ಇಲಾಖೆಯಿಂದ ಕೈಗೊಂಡ ಕ್ರಮಗಳು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಾಗೂ ಕಾರ್ಮಿಕ ಸಚಿವರು ಅಧಿಕಾರ ವಹಿಸಿಕೊಂಡ ನಂತರ ಇಲಾಖೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಳಗೊಂಡ ವರ್ಣಮಯ ಕಿರು ಹೊತ್ತಿಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅವಶ್ಯಕತೆವಿದ್ದಲ್ಲಿ ಮೆ:ಎಂ.ಸಿ & ಎ ಸಂಸ್ಥೆಯ ಮೂಲಕ ಮುದ್ರಿಸಿ ಸರಬರಾಜು ಮಾಡಲು ಒಪ್ಪಿ ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-05

**2016-17 ರಿಂದ 2019-20ರ ಸಾಲಿನವರೆಗೆ ಚಾರ್ಟ್‌ರ್ಡ್ ಅಕೌಂಟೆಂಟ್ ರವರು ಸಿದ್ಧಪಡಿಸಿ ಸಲ್ಲಿಸಿರುವ ಮಂಡಳಿಯ ಪರಿಷ್ಕೃತ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ಪಡೆಯುವ ಕುರಿತು**

ಮಂಡಳಿಯ 2016-17ನೇ ಸಾಲಿನ ಲೆಕ್ಕಪತ್ರಗಳನ್ನು ನಿರ್ವಹಿಸಲು ಚಾರ್ಟ್‌ರ್ಡ್ ಅಕೌಂಟೆಂಟ್ಸ್ ರವರನ್ನು ಮಂಡಳಿಯು ನೇಮಿಸಿಕೊಂಡಿದ್ದು, Accrual System of Accounting ನಲ್ಲಿ ಸಿದ್ಧಪಡಿಸಿ ಮಂಡಳಿಗೆ ಸಲ್ಲಿಸಲಾಗಿದೆ. ಸದರಿ ಲೆಕ್ಕಪತ್ರಗಳನ್ನು ದಿನಾಂಕ 18/01/2019 ರಂದು

ನಡೆದ ಮಂಡಳಿಯ 27 ನೇ ಸಭೆಯಲ್ಲಿ ಕಾರ್ಯಸೂಚಿ 02 ರಲ್ಲಿ ಮಂಡಳಿಯ ಅನುಮೋದನೆ ಪಡೆದು ಮಹಾಲೇಖಪಾಲರು (ಜಿ&ಎಸ್ಎಸ್ಎ), ಬೆಂಗಳೂರು ಇವರಿಗೆ ಸಲ್ಲಿಸಿ ಪರಿಶೋಧನೆಯ ನಂತರ ಕರಡು ಆಡಿಟ್ ವರದಿ ಬಂದಿದ್ದು, ಕರಡು ವರದಿಗೆ ಕಂಡಿಕೆವಾರು ಉತ್ತರಗಳನ್ನು ದಿನಾಂಕ 28-02-2020 ರಂದು ಸಲ್ಲಿಸಲಾಗಿದೆ. ಈ ನಡುವೆ ರಾಜ್ಯ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು 2006ರ ನಿಯಮ 33ಕ್ಕೆ ಬದಲಾವಣೆ ಮಾಡಿ ದಿನಾಂಕ 01-10-2019 ರಂದು ಅಧಿಸೂಚನೆ ಹೊರಡಿಸಲಾಗಿದೆ. ಈ ಬದಲಾದ ನಿಯಮದ ಪ್ರಕಾರ ಮಂಡಳಿಯ ಲೆಕ್ಕ ಪತ್ರಗಳನ್ನು ಸಿದ್ಧಪಡಿಸುವಲ್ಲಿ ಹಿಂದೆ ಅನುಸರಿಸುತ್ತಿದ್ದ Accrual System of Accounting ಗೆ ಬದಲಾಗಿ Cash System of Accounting ನ್ನು ಅನುಸರಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ, 2016-17ನೇ ಸಾಲಿನ ಲೆಕ್ಕ ಪತ್ರಗಳನ್ನು ಧೃಢೀಕರಿಸಿ, ಸಿಎಜಿ ಯವರಿಂದ ಮಂಡಳಿಯಲ್ಲಿ ಸ್ವೀಕೃತಿಯಾಗದ ಕಾರಣ ಸದರಿ ಲೆಕ್ಕ ಪತ್ರಗಳನ್ನು ಬದಲಾದ ನಿಯಮದಂತೆ ಪರಿಷ್ಕರಿಸಿ ದಿನಾಂಕ 28-02-2020 ರಂದು ಕರಡು ವರದಿಗೆ ಉತ್ತರಗಳ ಜೊತೆಗೆ ಸಲ್ಲಿಸಿದೆ. ಧೃಢೀಕರಿಸಿದ ಲೆಕ್ಕ ಪತ್ರಗಳನ್ನು ನಿರೀಕ್ಷಿಸಲಾಗಿದೆ. Cash System of Accounting ಬದಲಾವಣೆ ಮಾಡಿದ 2016-17ನೇ ಸಾಲಿನ ಲೆಕ್ಕಪತ್ರಗಳನ್ನು ಮಂಡಳಿಯ ಅನುಮೋದನೆಗೆ ಮಂಡಿಸಿದೆ.

ಅದೇ ರೀತಿ 2017-18 ರಿಂದ 2019-20ನೇ ಸಾಲುಗಳಿಗೆ Accrual System of Accounting ನಲ್ಲಿ ಸಿದ್ಧಪಡಿಸಿದ್ಧ ಲೆಕ್ಕ ಪತ್ರಗಳನ್ನು Cash System of Accounting ಗೆ ಬದಲಾವಣೆ ಮಾಡಿ ಸಂಬಂಧಪಟ್ಟ ಲೆಕ್ಕ ಪುಸ್ತಕಗಳಲ್ಲಿ ತಿದ್ದುಪಡಿ ಮಾಡಲಾಗಿದೆ. ಈ ಎಲ್ಲಾ ಮೂರು ಸಾಲಿನ (2017-18 ರಿಂದ 2019-20) ಲೆಕ್ಕ ಪತ್ರಗಳನ್ನು ಮಂಡಳಿಯ ಅನುಮೋದನೆ ಪಡೆದ ನಂತರ ಮಹಾಲೇಖಪಾಲರು (ಜಿ&ಎಸ್ಎಸ್ಎ), ಬೆಂಗಳೂರು ಇವರಿಗೆ ಲೆಕ್ಕ ಪರಿಶೋಧನೆಗಾಗಿ ಸಲ್ಲಿಸಬೇಕಾಗಿರುವುದರಿಂದ ಅನುಮೋದನೆಗಾಗಿ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯಲ್ಲಿ ಕೋರಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು ಸದರಿ 2016-17 ರಿಂದ 2019-20ರ ಸಾಲಿನ ಲೆಕ್ಕಪತ್ರಗಳಿಗೆ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

## ವಿಷಯ ಸಂಖ್ಯೆ-06

**2020-21 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧ ಪಡಿಸಲು ಮತ್ತು ಆದಾಯ ತೆರಿಗೆ ವಿಷಯಗಳಿಗೆ ಸಂಬಂಧಿಸಿದಂತೆ ಬದ್ರಿ ಮಧುಸೂಧನ್ & ಶ್ರೀನಿವಾಸನ್ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ಸೇವೆಯನ್ನು ಮುಂದುವರಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು**

2020-21 ನೇ ಸಾಲಿನ ಮಂಡಳಿಯ ಆದಾಯ ತೆರಿಗೆ ವಿಷಯಗಳನ್ನು ಮತ್ತು ಲೆಕ್ಕ ಪತ್ರಗಳನ್ನು ನಿರ್ವಹಿಸಲು ಮೆ॥ ರಮೇಶ್ ಅಶ್ವಿನ್ & ಕಾರಂತ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ದಿನಾಂಕ:19/11/2020 ರಂದು ನಡೆದ ಮಂಡಳಿಯ 31ನೇ ಸಭೆಯಲ್ಲಿ ಕಾರ್ಯಸೂಚಿ 8ರಲ್ಲಿ ಅನುಮೋದನೆ ಪಡೆದು ದಿನಾಂಕ: 27/12/2020 ರಂದು ಸಂಸ್ಥೆಯವರಿಗೆ

ಅವರ ಒಪ್ಪಿಗೆ ಮತ್ತು ಒಡಂಬಡಿಕೆ ಮಾಡಿಕೊಳ್ಳಲು ಹಾಗೂ ಪಾವತಿಸಬೇಕಾದ ಶುಲ್ಕದ ಬಗ್ಗೆ ಮಂಡಳಿಗೆ ಭೇಟಿ ನೀಡಿ ಚರ್ಚಿಸಲು ಕೋರಿ ಪತ್ರ ಬರೆಯಲಾಗಿತ್ತು. ಸದರಿ ಪತ್ರಕ್ಕೆ ದಿನಾಂಕ: 28/12/2020 ರಂದು ಒಪ್ಪಿಗೆ ಸೂಚಿಸಿ ಪತ್ರ ಬರೆದಿದ್ದರು. ದಿನಾಂಕ: 02/01/2021 ರಂದು ಸದರಿ ಸಂಸ್ಥೆಯವರು ಕಛೇರಿಗೆ ಭೇಟಿ ನೀಡಿ ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ಕಾರ್ಯದರ್ಶಿಯವರ ಜೊತೆ ಚರ್ಚಿಸಿದ ಮೇಲೆ ದಿನಾಂಕ: 04/01/2021 ರ ಪತ್ರದಲ್ಲಿ ಅನಿವಾರ್ಯ ಕಾರಣಗಳಿಂದ ಸದರಿ ಕೆಲಸಗಳನ್ನು ವಹಿಸಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಈ ನಡುವೆ ದಿನಾಂಕ:01/01/2021ರಂದು ಆದಾಯ ತೆರಿಗೆ ಇಲಾಖೆಯಿಂದ A.Y. 2017-18 ನೇ ಸಾಲಿಗೆ ಸಂಬಂಧಿಸಿದಂತೆ I.T. Return ನ್ನು ತಡವಾಗಿ ಸಲ್ಲಿಸಿದ್ಧಕ್ಕೆ ದಂಡವಿಧಿಸುವ ಬಗ್ಗೆ ದಿನಾಂಕ:11/01/2021 ರಂದು ಖುದ್ದಾಗಿ ಹಾಜರಾಗಬೇಕೆಂದು ನೋಟೀಸ್ ಜಾರಿಗೊಳಿಸಲಾಗಿರುತ್ತದೆ ಮತ್ತು A.Y. 2018-19 ನೇ ಸಾಲಿಗೆ ಸಂಬಂಧಿಸಿದಂತೆ Scrutiny Assesment ಗೆ ಆಯ್ಕೆ ಮಾಡಿ ಕೆಲವು ಮಾಹಿತಿಯನ್ನು ಒದಗಿಸಲು ಸಹಾ ಅದೇ ದಿನ ಮತ್ತೊಂದು ನೋಟಿಸ್‌ನಲ್ಲಿ ಸದರಿ ಮಾಹಿತಿಯನ್ನು ದಿನಾಂಕ:10/01/2021 ರೊಳಗೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಸದರಿ ಈ ಎರಡು ನೋಟಿಸ್‌ಗಳಿಗೆ ಕಾರ್ಯನಿರ್ವಹಿಸಲು ತುರ್ತಾಗಿ ಚಾರ್ಟರ್ಡ್ ಅಕೌಂಟೆಂಟ್‌ರವರ ಸೇವೆ ಅಗತ್ಯತೆ ಕಂಡು ಬಂದಿದ್ದರಿಂದ 2019-20 ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿರುವ ಮತ್ತು ಆದಾಯ ತೆರಿಗೆ ವಿಷಯಗಳ ಬಗ್ಗೆ ಕಾರ್ಯನಿರ್ವಹಿಸಿರುವ ಮೆ॥ ಬದ್ರಿ, ಮಧುಸೂಧನ್ ಮತ್ತು ಶ್ರೀನಿವಾಸನ್ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯವರನ್ನೇ 2020-21 ನೇ ಸಾಲಿಗೂ ಮುಂದಿನ ಮಂಡಳಿಯ ಸಭೆಯಲ್ಲಿ ಘಟನೋತ್ತರ ಅನುಮೋದನೆ ಪಡೆಯುವ ನಿಬಂಧನೆಯೊಂದಿಗೆ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ:19/01/2021 ರಂದು ಸದರಿ ಸಂಸ್ಥೆಯವರಿಗೆ 2020-21 ನೇ ಸಾಲಿಗೆ ಸದರಿ ಕರ್ತವ್ಯಗಳನ್ನು ಮುಂದುವರಿಸಲು ಪತ್ರ ಬರೆಯಲಾಗಿದೆ. ಅದರಂತೆ ಸದರಿ ಸಂಸ್ಥೆಯವರು ಕೆಲಸವನ್ನು ಪ್ರಾರಂಭಿಸಿರುತ್ತಾರೆ. ಆದ್ದರಿಂದ 2020-21ನೇ ಸಾಲಿಗೆ ಮಂಡಳಿಯ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಲು ಹಾಗೂ ಆಧಾಯ ತೆರಿಗೆ ವಿಷಯಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನಿರ್ವಹಿಸಲು ಮೆ॥ ಬದ್ರಿ, ಮಧುಸೂಧನ್ & ಶ್ರೀನಿವಾಸನ್ ಸಿ.ಎ. ಸಂಸ್ಥೆಯವರಿಗೆ ನೇಮಕಾತಿ ಮಾಡಿರುವುದನ್ನು ಘಟನೋತ್ತರ ಅನುಮೋದನೆ ನೀಡಲು ಕಾರ್ಯದರ್ಶಿಯವರು ಸಭೆಗೆ ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ 2020-21 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲು ಮತ್ತು ಆದಾಯ ತೆರಿಗೆ ವಿಷಯಗಳಿಗೆ ಸಂಬಂಧಿಸಿದಂತೆ ಮೆ॥ ಬದ್ರಿ, ಮಧುಸೂದನ್ ಮತ್ತು ಶ್ರೀನಿವಾಸನ್, ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ಸೇವೆಯನ್ನು ಮುಂದುವರಿಸಿರುವ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಘಟನೋತ್ತರ ಅನುಮೋದನೆ ನೀಡಲಾಯಿತು.

## ವಿಷಯ ಸಂಖ್ಯೆ-07

**ಮಂಡಳಿಯ ಸದಸ್ಯರಾದ ಶ್ರೀ ಪ್ರಕಾಸಂ ಇವರ ಕೋವಿಡ್-19 ಚಿಕಿತ್ಸೆಯ ವೈದ್ಯಕಿಯ ಬಿಲ್‌ಗಳ ಮೊತ್ತ ರೂ. 2,90,000.00 ಗಳ ಮರು ಪಾವತಿ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು**

ಕೋವಿಡ್-19 ಹಿನ್ನಲೆಯಲ್ಲಿ ಸಂಕಷ್ಟಕ್ಕೊಳಗಾದ ಕಾರ್ಮಿಕರ ಏಳಿಗೆಗಾಗಿ ಮಂಡಳಿಯ ಅಧಿಕಾರೇತರ ಸದಸ್ಯರು ತಮ್ಮ ಸಂಘಟನೆಗಳ ಮೂಲಕ ಶ್ರಮಿಸುತ್ತಿದ್ದು, ಸದರಿ ಸದಸ್ಯರುಗಳು ಕೋವಿಡ್-19ಗೆ ತುರ್ತಾಗಿ ಚಿಕಿತ್ಸೆ ಪಡೆದಲ್ಲಿ, ಅವರ ವೈದ್ಯಕೀಯ ವೆಚ್ಚವನ್ನು ಮಂಡಳಿ ವತಿಯಿಂದ ಭರಿಸಲು ದಿನಾಂಕ: 19-11-2020 ರಂದು ನಡೆದ ಮಂಡಳಿಯ 31 ನೇ ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ.

ಆದರಂತೆ, ಮಂಡಳಿಯ ಅಧಿಕಾರೇತರ ಸದಸ್ಯರಾದ ಶ್ರೀ. ಪ್ರಕಾಸಂ ಇವರು ಕೋವಿಡ್-19 ಹಿನ್ನಲೆಯಲ್ಲಿ ಲಾಕ್‌ಡೌನ್ ಅವಧಿಯಲ್ಲಿ ಸಂಕಷ್ಟದಲ್ಲಿದ್ದ ಕಾರ್ಮಿಕರಿಗಾಗಿ ಶ್ರಮಿಸಿದ್ದು, ಈ ಸಮಯದಲ್ಲಿ ಸದರಿಯವರಿಗೆ ಕೋವಿಡ್-19 ಪಾಸಿಟಿವ್ ದೃಢಪಟ್ಟಿದ್ದು, ಕೋವಿಡ್-19 ಚಿಕಿತ್ಸೆಗಾಗಿ ದಿನಾಂಕ: 22-10-2020 ರಂದು Astar CMI ಆಸ್ಪತ್ರೆಗೆ ದಾಖಲಾಗಿ ಕೋವಿಡ್-19 ಚಿಕಿತ್ಸೆ ಪಡೆದು, ದಿನಾಂಕ: 01-11-2020 ರಂದು ಡಿಸ್‌ಚಾರ್ಜ್ ಆಗಿರುತ್ತಾರೆ. ಪುನಃ ದಿನಾಂಕ: 08-11-2020 ರಂದು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ದಿನಾಂಕ: 23-11-2020 ರಂದು ಡಿಸ್‌ಚಾರ್ಜ್ ಆಗಿರುತ್ತಾರೆ. ಚಿಕಿತ್ಸೆಯ ಒಟ್ಟು ವೆಚ್ಚ ರೂ. 5,49,173/- ಗಳಾಗಿದ್ದು, ಇದರಲ್ಲಿ ರೂ.2,49,173/- ವೈದ್ಯಕೀಯ ವೆಚ್ಚ ಇನ್ಸುರೆನ್ಸ್ ಸಂಸ್ಥೆಯಿಂದ ಮರುಪಾವತಿಯಾಗಿದ್ದು, ಉಳಿದ ಮೊತ್ತ ರೂ. 2,90,000/- ಗಳನ್ನು ಶ್ರೀ. ಪ್ರಕಾಸಂ ರವರು ತಾವೇ ಭರಿಸಿದ್ದು, ಅವರು ಭರಿಸಿರುವ ವೈದ್ಯಕೀಯ ಮೊತ್ತವನ್ನು ಮಂಡಳಿಯ ವತಿಯಿಂದ ಮರುಪಾವತಿಸುವಂತೆ ಮನವಿ ಸಲ್ಲಿಸಿರುತ್ತಾರೆ.

ಮಂಡಳಿಯ 31ನೇ ಸಭೆಯ ವಿಷಯ ಸಂಖ್ಯೆ. 15 ರ ನಿರ್ಣಯದಂತೆ ಶ್ರೀ ಪ್ರಕಾಸಂ ಇವರು ಕೋವಿಡ್-19 ಚಿಕಿತ್ಸೆಗಾಗಿ ಭರಿಸಿದ ಮೊತ್ತ ರೂ.2,90,000/- ಗಳನ್ನು ಅವರ ಖಾತೆಗೆ ದಿನಾಂಕ:02-02-2021 ರಂದು ವರ್ಗಾಯಿಸಲಾಗಿರುತ್ತದೆ.

ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸದರಿಯವರಿಗೆ ಪಾವತಿಸಿದ ಮೊತ್ತ ರೂ.2.90 ಲಕ್ಷಗಳನ್ನು ಸಭೆಯಲ್ಲಿ ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಲಾಯಿತು.

# ವಿಷಯ ಸಂಖ್ಯೆ-08

**ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ.6742/2020 ರಲ್ಲಿ ಕೋವಿಡ್ ಪರಿಹಾರ ರೂ. 5,000/- ಗಳ ವಿತರಣೆಯ ಕುರಿತಾಗಿ ದಿನಾಂಕ: 22-12-2020 ರಂದು ನೀಡಿರುವ ತೀರ್ಮಾನವನ್ನು ಸಭೆಗೆ ಮಂಡಿಸುವ ಕುರಿತು**

ಕೋವಿಡ್-19 ರ ಸಾಂಕ್ರಾಮಿಕ ರೋಗ ಹಿನ್ನಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಪರಿಹಾರ ಸಹಾಯ ಧನ ರೂ. 5,000/- ಘೋಷಿಸಿಲಾಗಿದ್ದು, ಅದರಂತೆ ಈ ಸಹಾಯಧನವನ್ನು ದಿನಾಂಕ: 23-03-2020ರ ಅಂತ್ಯಕ್ಕೆ ನೋಂದಣಿಗೊಂಡಿರುವ ಒಟ್ಟು 21,78,019 ಫಲಾನುಭವಿಗಳ ಪೈಕಿ 16,48,431 ಫಲಾನುಭವಿಗಳು ಸದರಿ ಯೋಜನೆಯಡಿ ಸಹಾಯಧನ ಪಡೆದಿದ್ದು, ಉಳಿದ 5,29,588 ಫಲಾನುಭವಿಗಳಿಗೆ ಸಹಾಯಧನ ಪಾವತಿಸುವುದರ ಬಗ್ಗೆ ದಿನಾಂಕ: 30-09-2020 ರಂದು ನಡೆದ ಮಂಡಳಿಯ 30 ನೇ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲಾಗಿರುತ್ತದೆ. ಕೋವಿಡ್-19 ಪರಿಹಾರ ಸಹಾಯ ಧನ ರೂ.5,000/- ಕುರಿತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:6742/2020 ದಾಖಲಾಗಿದ್ದು, ಸದರಿ ಅರ್ಜಿಯ ವಿಚಾರಣೆ ಜರುಗುತ್ತಿರುವುದರಿಂದ, ಘನ ನ್ಯಾಯಾಲಯದ ಆದೇಶದಂತೆ ಕ್ರಮವಹಿಸಲು 30 ನೇ ಮಂಡಳಿಯ ಸಭೆಯ ವಿಷಯ ಸಂಖ್ಯೆ.12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಅದರಂತೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ:6742/2020 ಕುರಿತು ದಿನಾಂಕ: 22-12-2020 ರಂದು ನೀಡಿರುವ ಆದೇಶದಲ್ಲಿ ಈಗಾಗಲೇ ಮಂಡಳಿಯು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವ ಅನುಪಾಲನಾ ವರದಿಯನ್ನು ಅಂಗೀಕರಿಸಿದ್ದು, ಈ ವರದಿಯನ್ನು ದೂರುದಾರರು ಪರಿಶೀಲಿಸಿ, ಯಾವುದಾದರೂ ಲೋಪದೋಷಗಳು ಕಂಡು ಬಂದಲ್ಲಿ ಪುನರ್ ಪರಿಶೀಲನಾ ರಿಟ್ ಅರ್ಜಿಯನ್ನು ಸಲ್ಲಿಸಲು ಆದೇಶಿಸಲಾಗಿದೆ. ಸದರಿ ಆದೇಶದಲ್ಲಿ ಉಳಿದ ಫಲಾನುಭವಿಗಳಿಗೆ ಪರಿಹಾರ ಸಹಾಯ ಧನ ರೂ. 5,000/- ನೀಡುವ ಕುರಿತು ನಮೂದಿಸಿರುವುದಿಲ್ಲ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:6742/2020 ರಲ್ಲಿ ದಿನಾಂಕ; 22-12-2020 ರಂದು ನೀಡಿರುವ ಆದೇಶದ ಪ್ರತಿಯನ್ನು ಮಂಡಳಿಯ ಅವಗಾಹನೆಗಾಗಿ ಸಲ್ಲಿಸುತ್ತಾ ವಿವಿಧ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳ ಹತ್ತಿರ 95,017 ಸಹಾಯಧನದ ಅರ್ಜಿಗಳು ಬಾಕಿ ಇರುತ್ತವೆ. ಸದರಿ ಅರ್ಜಿಗಳಿಗೆ ರೂ.47,50,85,000/- ಅನುದಾನದ ಅವಶ್ಯಕತೆ ಇರುತ್ತದೆ. ಕೆನರಾ ಬ್ಯಾಂಕ್ ಹೊಂಬೇಗೌಡನಗರ ಶಾಖೆಯಲ್ಲಿ 7017 ಸಹಾಯಧನದ ಅರ್ಜಿಗಳು ಪಾವತಿಗೆ ಬಾಕಿ ಇರುತ್ತವೆ. ಸದರಿ ಅರ್ಜಿಗಳಿಗೆ ರೂ.3,50,85,000/-ಅನುದಾನದ ಅವಶ್ಯಕತೆ ಇರುತ್ತದೆ. ಒಟ್ಟು 1,02,034 ಸಹಾಯಧನದ ಅರ್ಜಿಗಳು ಬಾಕಿ ಇದ್ದು, ಒಟ್ಟು ರೂ.51,01,70,000/- ಮೊತ್ತವು ಪಾವತಿಗೆ ಬೇಕಾಗುತ್ತದೆ. ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಹೆಚ್ಚಿನ ಮಾಹಿತಿಯೊಂದಿಗೆ ಮುಂದಿನ ಮಂಡಳಿಯ ಸಭೆಗೆ ಮಂಡಿಸಲು ಮಂಡಳಿಯ ಕಾರ್ಯದರ್ಶಿಯವರಿಗೆ ಸೂಚಿಸಿದರು.

## ವಿಷಯ ಸಂಖ್ಯೆ-09

**ಬಿಎಂಟಿಸಿ ಸಂಸ್ಥೆಯವರು ಫೆಬ್ರವರಿ ಮತ್ತು ಮಾರ್ಚ್ 2021 ರ ಮಾಹೆಯಲ್ಲಿ ಬಸ್ ಪಾಸ್ ವಿತರಿಸಲು ಅವಶ್ಯಕತೆಯಿರುವ ಹೆಚ್ಚುವರಿ ಮೊತ್ತ ರೂ.15.00 ಕೋಟಿಗಳನ್ನು ಬಿಡುಗಡೆ ಮಾಡಲು ಕೋರಿರುವ ಕುರಿತು**

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಉಚಿತ ಬಿಎಂಟಿಸಿ ಬಸ್‌ಪಾಸ್ ವಿತರಣೆಗಾಗಿ ಬಿಎಂಟಿಸಿ ಸಂಸ್ಥೆಗೆ 2019-20ನೇ ಸಾಲಿನ ಅಂತ್ಯಕ್ಕೆ ಮಂಡಳಿಯಿಂದ ಮುಂಗಡವಾಗಿ ನೀಡಿದ್ದ ಅನುದಾನದ ಪೈಕಿ ರೂ.6,98,94,400/-ಗಳಷ್ಟು ಮೊತ್ತ ಉಳಿದಿದ್ದು, 2020-21ನೇ ಸಾಲಿನಲ್ಲಿ ಈ ಸೌಲಭ್ಯಕ್ಕಾಗಿ ರೂ.50.00 ಕೋಟಿಗಳಷ್ಟು ಮೊತ್ತವನ್ನು ಮೀಸಲಿಡಲಾಗಿತ್ತು. ಒಟ್ಟಾರೆಯಾಗಿ 2020-21ನೇ ಸಾಲಿಗೆ ರೂ.56.98 ಕೋಟಿಗಳಷ್ಟು ಮೊತ್ತ ಲಭ್ಯವಿತ್ತು. ಸದರಿ ಮೊತ್ತದಲ್ಲಿ ಡಿಸೆಂಬರ್ ಅಂತ್ಯದವರೆಗೆ 49.48 ಕೋಟಿಯಷ್ಟು ಮೊತ್ತವನ್ನು ಬಿಎಂಟಿಸಿ ಸಂಸ್ಥೆಗೆ ಪಾವತಿಸಲಾಗಿರುತ್ತದೆ. ಉಳಿದ 7.5 ಕೋಟಿಯಷ್ಟು ಮೊತ್ತವು ಜನವರಿ-2021ರ ಮಾಹೆಯಲ್ಲಿ ಖರ್ಚಾಗಲಿದ್ದು, ಉಳಿದ ಫೆಬ್ರವರಿ ಮತ್ತು ಮಾರ್ಚ್ ಮಾಹೆಗೆ ಹೆಚ್ಚುವರಿಯಾಗಿ ರೂ.15.00 ಕೋಟಿಗಳನ್ನು ಬಿಡುಗಡೆ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಬಿಎಂಟಿಸಿ ಸಂಸ್ಥೆಯವರು ಪತ್ರ ಸಂಖ್ಯೆ: ಬೆಮಸಾಸಂ:ಕೇಕ: ಸಂಚಾರ: ಆ:ಸಾ-2: 11ಬಿ: 1827: 2020-21, ದಿನಾಂಕ:27-01-2021 ರ ಮೂಲಕ ಕೋರಿರುತ್ತಾರೆ. ಸದರಿ ವಿಷಯವನ್ನು ಅನುಮೋದನೆಗಾಗಿ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಬಿಎಂಟಿಸಿ ಸಂಸ್ಥೆಯವರಿಗೆ ರೂ.15.00 ಕೋಟಿಗಳನ್ನು ಬಿಡುಗಡೆ ಮಾಡುವ ಕುರಿತು ಚರ್ಚಿಸಿ ತಿರ್ಮಾನಿಸಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು.

## ವಿಷಯ ಸಂಖ್ಯೆ-10

**ರಾಜ್ಯದಾದ್ಯಂತ ಇರುವ ಪ್ರಾದೇಶಿಕ ಮಟ್ಟದ 05 ಉಪ ಕಾರ್ಮಿಕ ಆಯುಕ್ತರ ಕಛೇರಿಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ನೀಡುವ ಕುರಿತು**

ಕಾರ್ಮಿಕ ಇಲಾಖೆಯ ಉಪ ಕಾರ್ಮಿಕ ಆಯುಕ್ತರುಗಳು ಮಂಡಳಿಗೆ ಸಂಬಂಧಿಸಿದ ಕೆಲಸಗಳು ಅಂದರೆ ಸೆಸ್ ಮೇಲ್ಮನವಿ ವಿಚಾರಣೆ, ಮಂಡಳಿಗೆ ಸಂಬಂಧಿಸಿದಂತೆ ನಿರ್ವಹಿಸುವ ಕರ್ತವ್ಯಗಳ ಪ್ರಗತಿ ಪರಿಶೀಲನೆ, ಕಟ್ಟಡ ನಿರ್ಮಾಣ ಕಾರ್ಮಿಕರು/ ಕಾರ್ಮಿಕ ಸಂಘಗಳಿಂದ ಬರುವ ದೂರು ಅರ್ಜಿಗಳ ವಿಚಾರಣೆ ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ. ಆದರೆ, ಸದರಿ ಅಧಿಕಾರಿಗಳ ಕಾರ್ಯಾಲಯಕ್ಕೆ ಮಂಡಳಿಯಿಂದ ಯಾವುದೇ ಸಿಬ್ಬಂದಿಗಳನ್ನು ಒದಗಿಸಿರುವುದಿಲ್ಲ. ಉಪ ಕಾರ್ಮಿಕ ಆಯುಕ್ತರುಗಳ ಕಛೇರಿಯಲ್ಲಿ ಕೆಲಸದ ಒತ್ತಡವಿದ್ದು ಸಿಬ್ಬಂದಿಗಳ ತೀವ್ರ ಕೊರತೆ ಇರುತ್ತದೆ. ಈ ಹಿನ್ನಲೆಯಲ್ಲಿ ಕಾರ್ಮಿಕ ಇಲಾಖೆಯ 05 ಪ್ರಾದೇಶಿಕದ ಉಪ ಕಾರ್ಮಿಕ ಆಯುಕ್ತರುಗಳ ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಮಂಡಳಿಯ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಲು ಕೋರಿ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ ರವರು ಕೋರಿರುತ್ತಾರೆ. ಆದುದರಿಂದ ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ-11**

**ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕ ನಿರೀಕ್ಷಕರು / ಹಿರಿಯ ಕಾರ್ಮಿಕ ನಿರೀಕ್ಷಕರು , ಬೆಂಗಳೂರು ಇವರುಗಳಿಗೆ ಮಂಡಳಿಯ ಕೆಲಸಕ್ಕಾಗಿ ಪ್ರತಿ ತಿಂಗಳಿಗೆ ರೂ. 5,000/- ಗಳಂತೆ ವಾಹನ ಭತ್ಯೆ ಮಂಜೂರು ಮಾಡುವಂತೆ ಕಾರ್ಮಿಕ ಆಯುಕ್ತರು ಪ್ರಸ್ತಾವನೆ ಸಲ್ಲಿಸಿರುವ ಕುರಿತು**

ಕಾರ್ಮಿಕ ಆಯುಕ್ತರು, ಪತ್ರ ಸಂಖ್ಯೆ:ಎನ್‌ಜಿಒ-4/ಸಿಆರ್-24/2020-21, ದಿನಾಂಕ:04-01-2021 ರ ಪತ್ರದ ಮೂಲಕ ಕರ್ನಾಟಕ ರಾಜ್ಯ ಕಾರ್ಮಿಕ ನಿರೀಕ್ಷಕರುಗಳ ಸಂಘ (ರಿ), ಕಾರ್ಮಿಕ ಭವನ, ಬೆಂಗಳೂರು, ಇವರ ಕೋರಿಕೆ ಅನ್ವಯ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ನಿರೀಕ್ಷಕರು/ ಹಿರಿಯ ಕಾರ್ಮಿಕ ನಿರೀಕ್ಷಕರು ಕಟ್ಟಡ ಕಾರ್ಮಿಕರ ವಿವಿಧ ಕ್ಲೈಂ ಅರ್ಜಿಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ಮಾಡಲು ಹಾಗೂ ಮಂಡಳಿಯ ಕೆಲಸಗಳನ್ನು ಕಾರ್ಮಿಕ ನಿರೀಕ್ಷಕರು ಹೆಚ್ಚಾಗಿ ನಿರ್ವಹಿಸುತ್ತಿರುವುದರಿಂದ ಸಕಾಲದಲ್ಲಿ ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ತಿಂಗಳಿಗೆ ತಲಾ ರೂ.5000/-ಗಳನ್ನು ವಾಹನ ಭತ್ಯೆಯಾಗಿ ಮಂಡಳಿಯ ವತಿಯಿಂದ ಮಂಜೂರು ಮಾಡುವ ಕುರಿತು ಕ್ರಮವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಈಗಾಗಲೇ ಬಿ.ಬಿ.ಎಂ.ಪಿ ವ್ಯಾಪ್ತಿಗೆ ಒಳಪಡದ ಕಾರ್ಮಿಕ ನಿರೀಕ್ಷಕರು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರ ಉಪಯೋಗಕ್ಕಾಗಿ ವಾಹನವನ್ನು ಕಾರ್ಮಿಕ ಅಧಿಕಾರಿಗಳ ಮೂಲಕ ಒದಗಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ನಿರೀಕ್ಷಕರು ಕೂಡ ಬೆಂಗಳೂರಿನ ಹೊರಗಿರುವ ಕಾರ್ಮಿಕ ನಿರೀಕ್ಷಕರು ನಿರ್ವಹಿಸುತ್ತಿರುವಂತೆಯೇ ಮಂಡಳಿಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ 49 ಹಿರಿಯ ಕಾರ್ಮಿಕ ನಿರೀಕ್ಷಕರಿಗೆ ಹಾಗೂ ಬೆಂಗಳೂರು ಗ್ರಾಮಂತರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ನಿರೀಕ್ಷಕರುಗಳಿಗೆ ತಲಾ ರೂ.5000/-ಗಳಂತೆ ಮಾಸಿಕ ವಾಹನ ಭತ್ಯೆ ನೀಡಿದಲ್ಲಿ ಒಟ್ಟು ಮಾಸಿಕವಾಗಿ ರೂ.2,45,000/- ರಂತೆ, ಒಂದು ವರ್ಷಕ್ಕೆ ರೂ.29,40,000/- ಮೊತ್ತದ ಅವಶ್ಯಕತೆ ಇರುತ್ತದೆ. ಸದರಿ ಭತ್ಯೆಯನ್ನು ನೀಡುವ ಕುರಿತು ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಬಿಬಿಎಂಪಿ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 49 ಹಿರಿಯ ಕಾರ್ಮಿಕ ನಿರೀಕ್ಷಕರಿಗೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ನಿರೀಕ್ಷಕರುಗಳಿಗೆ ಪ್ರತಿ ಮಾಹೆ ತಲಾ ರೂ.5000/-ಗಳಂತೆ ವಾಹನ ಭತ್ಯೆಯನ್ನು ಮಂಜೂರು ಮಾಡುವ ಕುರಿತು ಚರ್ಚಿಸಿ ನಿರ್ಣಯಿಸಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ-12**

**ವಿವಿಧ ಸೌಲಭ್ಯಗಳ ಅಡಿ ಫಲಾನುಭವಿಗಳಿಂದ ಸ್ವೀಕರಿಸುವ ಅರ್ಜಿಗಳನ್ನು ಪರಿಶೀಲಿಸಲು ಮೇಲ್ಮನವಿ ಪ್ರಾಧಿಕಾರವನ್ನು ರಚಿಸುವ ಕುರಿತು ಮತ್ತು ಮಂಡಳಿಯು ನೀಡುತ್ತಿರುವ ಪಿಂಚಣಿ ಸೌಲಭ್ಯಕ್ಕೆ ಪಿಂಚಣಿದಾರರು ಸಲ್ಲಿಸಬೇಕಾಗಿರುವ ಜೀವಿತ ಪ್ರಮಾಣ ಪತ್ರವನ್ನು ಕಾರ್ಮಿಕ ಇಲಾಖೆಯ ಅಧಿಕಾರಿಗಳು/ ಕಂದಾಯ ಇಲಾಖೆ ಅಧಿಕಾರಿಗಳು / ಬ್ಯಾಂಕ್ ಅಧಿಕಾರಿಗಳಿಂದ ಪಡೆಯಲು ಅವಕಾಶ ನೀಡುವ ಕುರಿತು**

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಬಿತರಿಗೆ ರೂಪಿಸಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿ ಸಲ್ಲಿಸುವ ಅರ್ಜಿಗಳನ್ನು ಜಿಲ್ಲಾ ಮಟ್ಟದ ಕಾರ್ಮಿಕ ಅಧಿಕಾರಿಗಳು ಮತ್ತು ವಿಭಾಗ ಮಟ್ಟದ ಸಹಾಯಕ ಕಾರ್ಮಿಕ ಆಯುಕ್ತರುಗಳು ಮಂಜೂರು ಮಾಡುತ್ತಿದ್ದಾರೆ. ಫಲಾನುಭವಿಗಳು ಸಲ್ಲಿಸುವ ಅರ್ಜಿಗಳನ್ನು ವಿಲೇವಾರಿ ಮಾಡುವ ಸಂದರ್ಭದಲ್ಲಿ ಕೆಲವೊಂದು ಲೋಪದೋಷಗಳಿಂದ ಅರ್ಜಿಗಳನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಫಲಾನುಭವಿಗಳು ಕ್ಲೈಂ ಅರ್ಜಿಗಳ ವಿಲೇವಾರಿ ಸಂಬಂಧ ದೂರು ಮತ್ತು ಮನವಿಗಳನ್ನು ಸಲ್ಲಿಸಲು ಪ್ರಸ್ತುತ ಯಾವುದೇ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಪ್ರಾದೇಶಿಕ ಮಟ್ಟದ ಉಪ ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಕ್ಲೈಂ ಅರ್ಜಿಗಳ ಮೇಲ್ಮನವಿ ಪ್ರಾಧಿಕಾರವನ್ನು ರಚಿಸಬಹುದಾಗಿರುತ್ತದೆ.

ಮಂಡಳಿಯ ನೋಂದಾಯಿತ ಫಲಾನುಭವಿಳಿಗೆ ಪಿಂಚಣಿ ಸೌಲಭ್ಯ ಮತ್ತು ದುರ್ಬಲತೆ ಪಿಂಚಣಿ ಸೌಲಭ್ಯವನ್ನು ಮತ್ತು ಪಿಂಚಣಿದಾರರು ಮೃತರಾದಾಗ ಅವರ ಪತಿ / ಪತ್ನಿಗೆ ಕುಟುಂಬ ಪಿಂಚಣಿ ಸೌಲಭ್ಯವನ್ನು ನೀಡಲಾಗುತ್ತಿದೆ. ಅದರಂತೆ ಪಿಂಚಣಿ ಪಡೆಯುವ ಫಲಾನುಭವಿಗಳು ಪ್ರತಿ ವರ್ಷ ಡಿಸೆಂಬರ್ ಮಾಹೆಯಲ್ಲಿ ಜೀವಿತ ಪ್ರಮಾಣ ಪತ್ರ ನೀಡಬೇಕಾಗಿರುತ್ತದೆ. ನಿಯಮಾವಳಿಗಳಲ್ಲಿ ಜೀವಿತ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಬ್ಯಾಂಕ್ ಮ್ಯಾನೇಜರ್‌ಗಳ ಮೂಲಕ ಪಡೆಯಬೇಕಿರುತ್ತದೆ.

ಆದರೆ ಕೆಲವೊಂದು ಬ್ಯಾಂಕಿನಲ್ಲಿ ಕಟ್ಟಡ ಕಾರ್ಮಿಕ ಫಲಾನುಭವಿಗಳಿಗೆ ಜೀವಿತ ಪ್ರಮಾಣ ಪತ್ರ ನೀಡುತ್ತಿಲ್ಲವೆಂದು ಹಲವಾರು ಕಾರ್ಮಿಕ ಸಂಘಟನೆಗಳು ದೂರುಗಳನ್ನು ಮಂಡಳಿಗೆ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಪಿಂಚಣಿಯನ್ನು ಪಡೆಯುವ ಪಿಂಚಣಿದಾರರು ಕಂದಾಯ ಇಲಾಖೆಯಿಂದ ಜೀವಿತ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುತ್ತಿರುತ್ತಾರೆ. ಹಾಗಾಗಿ ಇವರ ಜೊತೆಗೆ ಕಾರ್ಮಿಕ ಇಲಾಖೆಯ ಅಧಿಕಾರಿಗಳಾದ ಉಪ ಕಾರ್ಮಿಕ ಆಯುಕ್ತರು, ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳು ಸಹ ಜೀವಿತ ಪ್ರಮಾಣ ಪತ್ರವನ್ನು ನೀಡಲು ಅವಕಾಶ ಕಲ್ಪಿಸಿದಲ್ಲಿ, ಅರ್ಹ ಪಿಂಚಣಿದಾರರು ಸಕಾಲದಲ್ಲಿ ಜೀವಿತ ಪ್ರಮಾಣ ಪತ್ರವನ್ನು ಪಡೆದು ಅರ್ಜಿ ಸಲ್ಲಿಸಲು ಸಾಧ್ಯವಾಗಲಿದೆ. ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕಾರ್ಮಿಕ ಇಲಾಖೆಯ ಉಪ ಕಾರ್ಮಿಕ ಆಯುಕ್ತರು, ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳಿಗೆ ಜೀವಿತ ಪ್ರಮಾಣ ಪತ್ರವನ್ನು ವಿತರಿಸಲು ಅಧಿಕಾರವನ್ನು ನೀಡಲು ಹಾಗೂ ಪ್ರಾದೇಶಿಕ ಮಟ್ಟದ ಉಪ ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ

ಕ್ಲೈಂ ಅರ್ಜಿಗಳ ಮೇಲ್ಮನವಿ ಪ್ರಾಧಿಕಾರವನ್ನು ರಚಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ವಿಷಯ ಸಂಖ್ಯೆ-13

**ಮಂಡಳಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ ಪರಿಷ್ಕೃತಗೊಳಿಸುವ ಕುರಿತು**

ಮಂಡಳಿಯಲ್ಲಿ ಅಧಿಕಾರಿಗಳನ್ನು ಹೊರತುಪಡಿಸಿ ಎಲ್ಲಾ ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದ ಮೇಲೆ ಏಜೆನ್ಸಿಯಿಂದ ನಿಯೋಜಿತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮಂಡಳಿಯಲ್ಲಿ ಡೆಸ್ಕ್ ಆಫೀಸರ್, ಜೂನಿಯರ್ ಡೆಸ್ಕ್ ಆಫೀಸರ್, ಸೀನಿಯರ್ ಅಸಿಸ್ಟೆಂಟ್, ಜೂನಿಯರ್ ಅಸಿಸ್ಟೆಂಟ್, ಗ್ರೂಪ್ ಡಿ ಮತ್ತು ಸ್ವಚ್ಛತಾ ಸಿಬ್ಬಂದಿಗಳು ಹಾಗೂ ಐಟಿ ಶಾಖೆಯಲ್ಲಿ ನೆಟವರ್ಕ್ ಅಡ್ಮಿನಿಸ್ಟ್ರೇಟರ್, ಅಸಿಸ್ಟೆಂಟ್ ಪ್ರೋಗ್ರಾಮರ್, ಸಿಸ್ಟಮ್ ಅನಾಲಿಸ್ಟ್ ಮತ್ತು ಪ್ರೋಗ್ರಾಮರ್‌ಗಳು ಕೆಲಸ ನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಮಂಡಳಿಯಲ್ಲಿ ಸಿಬ್ಬಂದಿಗಳಿಗೆ ನೀಡುತ್ತಿರುವ ಗರಿಷ್ಠ ವೇತನವು ರೂ.23,175/- ಡೆಸ್ಕ್ ಆಫೀಸರ್‌ಗೆ ಇರುತ್ತದೆ. ಕನಿಷ್ಠ ವೇತನವು ರೂ 15,672/- ಗ್ರೂಪ್ ಡಿ ಮತ್ತು ಸ್ವಚ್ಛತಾ ಸಿಬ್ಬಂದಿಗಳಿಗೆ ಇರುತ್ತದೆ. ಐ.ಟಿ ಶಾಖೆಯಲ್ಲಿ ರೂ.28,000/- ರಿಂದ ರೂ.31,000/- ಇರುತ್ತದೆ.

2017 ರಲ್ಲಿ ಹಾಗೂ 2019 ರಲ್ಲಿ ಸಿಬ್ಬಂದಿಗಳಿಗೆ ಎರಡು ಬಾರಿ ಮಾತ್ರ ವೇತನ ಪರಿಷ್ಕರಣೆ ಮಾಡಲಾಗಿರುತ್ತದೆ. ಇದನ್ನು ಹೊರತುಪಡಿಸಿ ಕಾಲಕಾಲಕ್ಕೆ ನೀಡುವ ವ್ಯತ್ಯಸ್ಥ ತುಟ್ಟಿ ಭತ್ಯೆಯನ್ನು ಮಾತ್ರ ಪಾವತಿಸಲಾಗುತ್ತಿದೆ. ದಿನನಿತ್ಯದ ಬೆಲೆ ಏರಿಕೆ ಮತ್ತು cost of living ಹೆಚ್ಚಳದಿಂದ ಮಂಡಳಿಯ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನವನ್ನು ಹೆಚ್ಚಳ ಮಾಡುವುದು ಅಗತ್ಯವಾಗಿರುತ್ತದೆ. ಪ್ರಸ್ತುತ ಮಂಡಳಿಯ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ಒಟ್ಟು ಮಾಸಿಕ ವೇತನವು ರೂ.1,37,31,348/- ಆಗಿರುತ್ತದೆ. ಇದರಲ್ಲಿ ವಾಹನ ಚಾಲಕರು ಹಾಗೂ ಸ್ವಚ್ಛತಾ ಸಿಬ್ಬಂದಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸಿಬ್ಬಂದಿಗಳಿಗೆ ಶೇ.20 ರಂತೆ ಹಾಗೂ Network Administrator ಗೆ ಶೇ.25 ರಂತೆ ವೇತನ ಹೆಚ್ಚಳ ನೀಡಿದಲ್ಲಿ ಮಂಡಳಿಗೆ ಮಾಸಿಕ ರೂ.2,04,296 ಹಾಗೂ ವಾರ್ಷಿಕ ರೂ.24,51,552/- ಗಳನ್ನು ಹೆಚ್ಚುವರಿ ಪಾವತಿಸಬೇಕಾಗುತ್ತದೆ.

ಮಂಡಳಿಯಲ್ಲಿ ಹೊಸದಾಗಿ ನೋಂದಣಿ, ನವೀಕರಣ, ಸುಂಕ ಹಾಗೂ ಲೆಕ್ಕ ಪತ್ರಗಳ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿ ಪಡಿಸುತ್ತಿರುವುದರಿಂದ, Network Administrator ರವರ ಹೆಚ್ಚುವರಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಅವರಿಗೆ ಶೇ.25 ರಷ್ಟು ವೇತನ ಹೆಚ್ಚಳವನ್ನು ಪ್ರಸ್ತಾಪಿಸಲಾಗಿದೆ. ಸದರಿ ವಿಷಯವನ್ನು ಅನುಮೋದನೆಗಾಗಿ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ವಿಷಯದಲ್ಲಿ ಮುಂದಿನ ನಿರ್ಧಾರ ಕೈಗೊಳ್ಳಲು ಸಭೆಯು ಅಧ್ಯಕ್ಷರಿಗೆ ಪೂರ್ಣ ಅಧಿಕಾರ ನೀಡಿ ಸರ್ವಾನುಮತದಿಂದ ಅನುಮೋದಿಸಿತು.

## ವಿಷಯ ಸಂಖ್ಯೆ-14

**ಮಂಡಳಿಯಲ್ಲಿ ವಿವಿಧ ಇಲಾಖೆಗಳಿಂದ, ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಸ್ವೀಕೃತವಾಗುವ ಚೆಕ್ ಮತ್ತು ಡಿಡಿಗಳನ್ನು ನಗದೀಕರಣಕ್ಕಾಗಿ Bank of Baroda, ಮೆಯೋಹಾಲ್ ಬ್ರಾಂಚ್, ಬೆಂಗಳೂರಿನಲ್ಲಿ ಪ್ರತ್ಯೇಕ ಖಾತೆ ತೆರೆದಿರುವುದರ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು**

ಮಂಡಳಿಯಲ್ಲಿ ವಿವಿಧ ಇಲಾಖೆಗಳಿಂದ, ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಸುಂಕದ ಮೊತ್ತವು ಚೆಕ್/ಡಿಡಿಗಳ ಮುಖಾಂತರ ಸ್ವೀಕೃತಗೊಂಡು ಅವುಗಳ ನಗದಿಕರಣಕ್ಕಾಗಿ ಕೆನರಾ ಬ್ಯಾಂಕ್, ಹೊಂಬೇಗೌಡನಗರ ಶಾಖೆ, ಬೆಂಗಳೂರು ಇಲ್ಲಿ ತೆರೆದಿರುವ ಸೆಸ್ ಸುಂಕ ಖಾತೆ ಸಂಖ್ಯೆ:1371101079786 ಗೆ ಜಮೆ ಮಾಡಲಾಗುತ್ತಿದೆ ಹಾಗೂ ವಿವಿಧ ಇಲಾಖೆಗಳಿಂದ ಸೆಸ್ ಸುಂಕ ಮೊತ್ತವು RTGS/NEFT ಮುಖಾಂತರ ಸದರಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆ. ಹೀಗೆ ಚೆಕ್/ಡಿಡಿ ಹಾಗೂ RTGS/NEFT ಮುಖಾಂತರ ಸ್ವೀಕೃತಗೊಂಡ ಸೆಸ್ ಮೊತ್ತವನ್ನು ಸದರಿ ಬ್ಯಾಂಕಿನಲ್ಲಿ ತೆರೆದ ಸೆಸ್ ಖಾತೆಗೆ ಜಮೆಯಾಗುತ್ತಿದ್ದು, ಮಂಡಳಿಯಲ್ಲಿ Reconciliation ಮಾಡಲು ಕಷ್ಟಸಾಧ್ಯವಾಗುತ್ತಿರುವುದರಿಂದ ಮಂಡಳಿಯಲ್ಲಿ Bank Reconciliation ಅನ್ನು ಸುಲಲಿತ ಮಾಡಲು ಚೆಕ್/ಡಿಡಿಗಳ ಮುಖಾಂತರ ಸ್ವೀಕೃತಗೊಳ್ಳುವ ಸೆಸ್ ಮೊತ್ತಗಳನ್ನು ನಗಧಿಕರಣ ಮಾಡಿ ಜಮೆ ಮಾಡಲು Bank Of Baroda, Mayohall Branch, Bangaluru ಇಲ್ಲಿ ದಿನಾಂಕ:01/02/2021 ರಂದು ಪ್ರತ್ಯೇಕ ಉಳಿತಾಯ ಖಾತೆ ಸಂಖ್ಯೆ:73890100026129 ನ್ನು ತೆರೆದು ಸೇವೆಯನ್ನು ಪಡೆಯಲಾಗುತ್ತಿದೆ. ಅದರಂತೆ ಸದರಿ ಖಾತೆ ತೆರೆದಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಲು ಕೋರಿ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯಲ್ಲಿ ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಲಾಯಿತು.

## ವಿಷಯ ಸಂಖ್ಯೆ-15

**Geo-Spatial ತಂತ್ರಾಂಶದ ಮೂಲಕ ಪ್ರಾಯೋಗಿಕವಾಗಿ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ನಿರ್ಮಾಣ ಚಟುವಟಿಕೆಗಳಲ್ಲಿ Cess Assesment ಮಾಡಿ ಹೆಚ್ಚುವರಿ ಸುಂಕ ಸಂಗ್ರಹಣೆ ಮಾಡಲು ಹೊಸ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವ ಕುರಿತು**

ಮಂಡಳಿಯು ಕೇಂದ್ರ ಕಾಯ್ದೆ ಮತ್ತು ನಿಯಮಗಳ ಅನುಸಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಅಂದಾಜು ವೆಚ್ಚದ ಶೇ.1ರಷ್ಟು ಮೊತ್ತವನ್ನು ಸುಂಕವನ್ನಾಗಿ ಸಂಗ್ರಹಿಸುತ್ತಿರುತ್ತದೆ. ಆದರೆ, ರಾಜ್ಯಾದ್ಯಂತ ಪ್ರತಿ ವರ್ಷ ಹೆಚ್ಚಿನ ಪ್ರಮಾಣದ ನಿರ್ಮಾಣ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರೂ ಸಹ ನಿರೀಕ್ಷಿತ ಮಟ್ಟದಲ್ಲಿ ಸುಂಕ ಸಂಗ್ರಹಣೆಯಾಗದೇ ಇರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ

GEO Spatial ತಂತ್ರಾಂಶದ ಮೂಲಕ ಪ್ರಾಯೋಗಿಕವಾಗಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ನಿರ್ಮಾಣ ಚಟವಟಿಕೆಗಳನ್ನು GEO Tag ಮಾಡಿ ಆ ಕಾಮಗಾರಿಗಳ ಸೆಸ್ ಅಸೆಸ್‌ಮೆಂಟ್ ಮಾಡಿ ಸಮರ್ಪಕವಾಗಿ ಸುಂಕ ಸಂಗ್ರಹಣೆ ಮಾಡಲು ಹೊಸ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವ ಅವಶ್ಯಕತೆ ಇರುತ್ತದೆ.

ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಸಾರ್ವಜನಿಕ ವಲಯದ ಮಾಹಿತಿ ಮತ್ತು ಪ್ರಸರಣ ಸಚಿವಾಲಯದಡಿಯ BECIL (Broadcast Engineering Consultants India Limited) ಸಂಸ್ಥೆಯು GIS ಸರ್ವೇಯ ಮೂಲಕ ನಿರ್ಮಾಣ ಚಟುವಟಿಕೆಗಳಿಂದ ಸುಂಕವನ್ನು ಸಮರ್ಪಕವಾಗಿ ಸಂಗ್ರಹಿಸುವ ಕುರಿತಾಗಿ Techno Commercial Proposal ಅನ್ನು ಮಂಡಳಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದಾಗ ಉಪಗ್ರಹದ ಮೂಲಕ ನಿರ್ಮಾಣ ಚಟುವಟಿಕೆಗಳ ಬಗ್ಗೆ ನಿಗಾವಿರಿಸಿ ಸಂಬಂಧಪಟ್ಟ ಛಾಯಾ ಚಿತ್ರಗಳನ್ನು ಕಾಲಕಾಲಕ್ಕೆ ಪಡೆದು ಪ್ರತಿಯೊಂದು ಕಾಮಗಾರಿಗೂ QR Code ನೀಡಲಾಗುವುದೆಂದು ತಿಳಿಸಿರುತ್ತಾರೆ. ಒಟ್ಟಾರೆಯಾಗಿ GEO Tag ಮಾಡಲು ಪ್ರತಿ ಚದರ ಕಿ.ಮೀ.ಗೆ ರೂ.2.05 ಲಕ್ಷ ಖರ್ಚಾಗಲಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ. ಬೆಂಗಳೂರು ನಗರ ಜಿಲ್ಲೆಯ ಒಟ್ಟು ವಿಸ್ತೀರ್ಣ 2196 ಚದರ ಕಿ.ಮೀ ಇದ್ದು, ಒಟ್ಟು ಮೊತ್ತ ರೂ.45,01,80,000/- ಆಗುವುದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಟ್ಟು ವಿಸ್ತೀರ್ಣ 2298 ಚದರ ಕಿ.ಮೀ ಇದ್ದು ಒಟ್ಟು ಮೊತ್ತ ರೂ.47,10,90,000/- ಆಗುವುದು. ಅದರಂತೆ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಟ್ಟು ವಿಸ್ತೀರ್ಣ 4494 ಚದರ ಕಿ.ಮೀ. ಆಗಲಿದ್ದು ಒಟ್ಟು ರೂ.92,12,70,000/- ಖರ್ಚು ಆಗುತ್ತದೆ.

Geo-Spatial ತಂತ್ರಾಂಶದ ಮೂಲಕ ಪ್ರಾಯೋಗಿಕವಾಗಿ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ನಿರ್ಮಾಣ ಚಟುವಟಿಕೆಗಳಲ್ಲಿ Cess Assesment ಮಾಡಿ ಹೆಚ್ಚುವರಿ ಸುಂಕ ಸಂಗ್ರಹಣೆ ಮಾಡಲು ಹೊಸ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದಲ್ಲಿ ಮಂಡಳಿಗೆ ಹೆಚ್ಚು ಕಾರ್ಮಿಕ ಸುಂಕವು ಸಂಗ್ರಹಣೆಯಾಗುತ್ತದೆ. ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಸದರಿ ವಿಷಯದ ಬಗ್ಗೆ ಇನ್ನು ಹೆಚ್ಚಿನ ಮಾಹಿತಿ ಬೇಕಾಗಿದ್ದು, ಅಧ್ಯಕ್ಷರು ಹಾಗೂ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಸಿ, ಸದರಿ ಸಂಸ್ಥೆಯವರು ಇನ್ನೂ ಹೆಚ್ಚಿನ ಮಾಹಿತಿಯೊಂದಿಗೆ ಸಭೆಗೆ ಹಾಜರಾಗುವುದು ಎಂದು ಸೂಚಿಸಿದರು. ಸದರಿ ವಿಷಯದಲ್ಲಿ ಮುಂದಿನ ನಿರ್ಧಾರ ಕೈಗೊಳ್ಳಲು ಸಭೆಯು ಅಧ್ಯಕ್ಷರಿಗೆ ಪೂರ್ಣ ಅಧಿಕಾರ ನೀಡಿ ಸರ್ವಾನುಮತದಿಂದ ಅನುಮೋದಿಸಿತು.

## ವಿಷಯ ಸಂಖ್ಯೆ-16

**ಮಂಡಳಿ ವತಿಯಿಂದ ಕಟ್ಟಡ ಕಾರ್ಮಿಕರಿಗೆ ಟೆಂಡರ್ ಮೂಲಕ ಖರೀದಿಸಿ ವಿತರಿಸಲು ಇಚ್ಛಿಸಿರುವ ವಿವಿಧ ಟೂಲ್ ಕಿಟ್‌ಗಳಿಗೆ ಪ್ರಸ್ತುತ 3ನೇ ಪಾರ್ಟಿ ತಪಾಸಣೆಗಾಗಿ ಪ್ರಾಚಾರ್ಯರು, ಸರಕಾರಿ ಐಟಿಐ, ಡೈರಿ ಸರ್ಕಲ್, ಬೆಂಗಳೂರು ರವರಿಗೆ ಮಾತ್ರ ಸಲ್ಲಿಸಲಾಗುತ್ತಿದೆ. ಸದರಿ ಸಂಸ್ಥೆಗೆ ಹೆಚ್ಚುವರಿಯಾಗಿ ಬೆಂಗಳೂರಿನಲ್ಲಿ ಇರುವ ಇತರೆ ಸರಕಾರಿ ಐಟಿಐ, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗಳ ಸೇವೆಯನ್ನು 3ನೇ ಪಾರ್ಟಿ ಮೂಲಕ ತಪಾಸಣೆ ಸೇವೆಯನ್ನು ಪಡೆಯಲು ಅನುಮೋದಿಸುವ ಕುರಿತು**

ಮಂಡಳಿಯ ರಾಜ್ಯ ಮಟ್ಟದ ಸಮಿತಿಯ 2ನೇ ಸಭೆಯ ನಡವಳಿ ದಿನಾಂಕ:17-07-2018 ರ ಇತರೆ ವಿಷಯ 8 ರಲ್ಲಿ ಶ್ರಮ ಸಾಮರ್ಥ್ಯ ಯೋಜನೆಯಡಿಯಲ್ಲಿ ಖರೀದಿಸಲಾದ ಸಾಮಗ್ರಿಗಳನ್ನು ಮೂರನೇ ವ್ಯಕ್ತಿಯ ತಪಾಸಣೆ ಜರುಗಿಸಲು ಪ್ರಾಚಾರ್ಯರು, ಐ.ಟಿ.ಐ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇವರಿಗೆ ವಹಿಸಲು ತೀರ್ಮಾನಿಸಲಾಗಿರುತ್ತದೆ.

ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬಾರ್‌ಬೆಂಡಿಂಗ್ ಮತ್ತು ಪೇಂಟಿಂಗ್ ಕಿಟ್‌ಗಳನ್ನು ಸರಬರಾಜು ಮಾಡಲು ಕೆಟಿಪಿಪಿ ನಿಯಮಾನುಸಾರ ಟೆಂಡರ್ ಕರೆದು ಅರ್ಹ ಗುತ್ತಿಗೆದಾರರಾದ ಮೆ॥ಸಂಭವ್ ಎಂಟರ್‌ಪ್ರೈಸಸ್, ಬೆಂಗಳೂರು ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಅದರಂತೆ, ಸದರಿ ಸಂಸ್ಥೆಯವರು ಎಲ್ಲಾ ಕಿಟ್‌ಗಳನ್ನು ಸಿದ್ಧಪಡಿಸಿಕೊಂಡು ಸದರಿ ಕಿಟ್‌ಗಳ ಗುಣಮಟ್ಟವನ್ನು ಪರಿಶೀಲಿಸಲು ಮಂಡಳಿಗೆ ಕೋರಿರುತ್ತಾರೆ. ಅದರಂತೆ, ಪ್ರಾಚಾರ್ಯರು, ಐ.ಟಿ.ಐ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇವರಿಗೆ ದಿ:28-01-2021 ರಂದು ಪತ್ರ ಬರೆದು ಮೂರನೇ ವ್ಯಕ್ತಿಯ ತಪಾಸಣೆ ಕೈಗೊಳ್ಳಲು ತಿಳಿಸಲಾಗಿದೆ. ಆದರೆ, ಸದರಿಯವರು ಈವರೆಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದುದರಿಂದ, ಸದರಿ ಕಿಟ್‌ಗಳ ಸರಬರಾಜು ಸ್ಥಗಿತಗೊಂಡಿದೆ.

ಕೇವಲ ಒಂದೇ ಸಂಸ್ಥೆಯಿಂದ ಮೂರನೇ ವ್ಯಕ್ತಿ (Third Party Inspection) ತಪಾಸಣೆ ಕೈಗೊಳ್ಳುತ್ತಿರುವುದರಿಂದ ಈ ರೀತಿ ತೊಂದರೆಯಾಗುತ್ತಿದೆ. ಆದುದರಿಂದ ಬೆಂಗಳೂರಿನಲ್ಲಿರುವ ಇತರೆ ಸಂಸ್ಥೆಗಳಾದ ಸರ್ಕಾರಿ ಐ.ಟಿ.ಐ ಕಾಲೇಜುಗಳು, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗಳ ಮುಖಾಂತರ 3ನೇ ವ್ಯಕ್ತಿ ತಪಾಸಣೆ ಸೇವೆಯನ್ನು ಪಡೆದುಕೊಂಡಲ್ಲಿ ತ್ವರಿತವಾಗಿ ಫಲಿತಾಂಶವನ್ನು ಪಡೆದುಕೊಳ್ಳಬಹುದಾಗಿರುವುದರಿಂದ ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಬೆಂಗಳೂರು ವ್ಯಾಪ್ತಿಯಲ್ಲಿ ಇರುವ ಇತರೆ ಸರ್ಕಾರಿ ಐ.ಟಿ.ಐ ಕಾಲೇಜುಗಳು, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗಳ ಮುಖಾಂತರ 3ನೇ ವ್ಯಕ್ತಿ ತಪಾಸಣೆ ಸೇವೆಯನ್ನು ಪಡೆಯಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ವಿಷಯ ಸಂಖ್ಯೆ–17

**RPL ತರಬೇತಿ ನೀಡಲು ಆಯ್ಕೆಯಾದ ಅರ್ಹ ತರಬೇತಿ ಸಂಸ್ಥೆಗಳ ಮೂಲಕ ಶ್ರಮ ಸಾಮರ್ಥ್ಯ ಯೋಜನೆಯಡಿ ಅರ್ಹ ಕಟ್ಟಡ ಕಾರ್ಮಿಕರ ಅವಲಂಭಿತರಿಗೆ ವಿವಿಧ ತರಬೇತಿಗಳನ್ನು ಹಮ್ಮಿಕೊಳ್ಳಲು ಅನುಮೋದಿಸುವ ಕುರಿತು ಮತ್ತು RPL ತರಬೇತಿ ನೀಡಲು ಆಯ್ಕೆಯಾದ ಅರ್ಹ ತರಬೇತಿ ಸಂಸ್ಥೆಗಳಲ್ಲಿ ಹಂಚಿಕೆ ಮಾಡಿದ ಗುರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವ ಸಂಸ್ಥೆಗಳಿಗೆ ಹೆಚ್ಚಿನ ಗುರಿಯನ್ನು ನೀಡುವ ಬಗ್ಗೆ**

ಮಂಡಳಿಯ 26ನೇ ಸಭೆಯ ಕಾರ್ಯಸೂಚಿ 15 ರಲ್ಲಿ ಶ್ರಮ ಸಾಮರ್ಥ್ಯ ಯೋಜನೆಯಡಿ ಕಟ್ಟಡ ಕಾರ್ಮಿಕರ ಅವಲಂಭಿತರಿಗೆ ಈ ಕೆಳಕಾಣಿಸಿದ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿರುತ್ತದೆ.

1. ವೈಯಕ್ತಿಕ ಗಣಕ ಯಂತ್ರಗಳ ಜೋಡಣೆ ಮತ್ತು ನಿರ್ವಹಣೆ
2. ಗೃಹೋಪಯೋಗಿ ವಸ್ತುಗಳ ರಿಪೇರಿ, ನಿರ್ವಹಣೆ ಮತ್ತು ಜೋಡಣೆಗಳ ಬಗ್ಗೆ ತರಬೇತಿ: ಎಲೆಕ್ಟ್ರಾನಿಕ್ ವಸ್ತುಗಳು
3. ಗೃಹೋಪಯೋಗಿ ವಸ್ತುಗಳಾದ ಗ್ಯಾಸ್ ಸ್ಟವ್ ಮತ್ತು ಕುಕ್ಕರ್ ರಿಪೇರಿ ಮತ್ತು ನಿರ್ವಹಣೆ ಮತ್ತು ಜೋಡಣೆ ಮತ್ತು ಸುರಕ್ಷತೆ ಬಗ್ಗೆ ತರಬೇತಿ
4. ಮೊಬೈಲ್ ಫೋನ್ ಹಾರ್ಡ್‌ವೇರ್ ದುರಸ್ಥಿ ತಂತ್ರಜ್ಞಾನ.
5. ಸ್ವ ಉದ್ಯಮಿ ಟೈಲರ್ : ಫ್ಯಾಶನ್ ಡಿಸೈನಿಂಗ್, ಎಂಬ್ರೈಡರಿ, ಭಾರತೀಯ ಶೈಲಿಯ ಮತ್ತು ಪಾಶ್ಚಿಮಾತ್ಯ ಶೈಲಿಯ ಉಡುಪುಗಳು
6. ಟ್ರ್ಯಾಕ್ಟರ್ ಮೆಕ್ಯಾನಿಕ್, ಕೃಷಿ ಯಂತ್ರೋಪಕರಣ ರಿಪೇರಿ ಹಾಗೂ ನಿರ್ವಹಣೆ: ಟ್ರ್ಯಾಕ್ಟರ್ ಹಾಗು ಇನ್ನಿತರೆ ಯಂತ್ರೋಪಕರಣಗಳು

ಮೇಲಿನ ವೃತ್ತಿಗಳ ಜೊತೆಗೆ ಕೌಶಲ್ಯಾಭಿವೃದ್ಧಿ ಸಂಸ್ಥೆಯವರಿಂದ ಇತರೆ ವೃತ್ತಿಗಳಿಗೆ ನೀಡಬಹುದಾದ ತರಬೇತಿಗಳ ವಿವರ ಪಡೆದು, ಸದರಿ ಎಲ್ಲಾ ಘಟಕಗಳಡಿಯಲ್ಲಿ ತರಬೇತಿಗಳನ್ನು ನೀಡಲು ಅನುಮೋದಿಸಲಾಗಿರುತ್ತದೆ.

ಪ್ರಸ್ತುತ ಆರ್.ಪಿ.ಎಲ್ ತರಬೇತಿ ನೀಡಲು ಕರೆಯಲಾದ ಟೆಂಡರ್‌ನಲ್ಲಿ 15 ಸಂಸ್ಥೆಗಳು ಆಯ್ಕೆಯಾಗಿದ್ದು, ಸದರಿ 15 ಸಂಸ್ಥೆಗಳ ಪೈಕಿ 02 ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಅರ್ಹ ಸಂಸ್ಥೆಗಳ ಮೂಲಕ ಶ್ರಮ ಸಾಮಥ್ಯ ಯೋಜನೆಯಡಿ ಕಟ್ಟಡ ಕಾರ್ಮಿಕರ ಅವಲಂಬಿತರಿಗೆ ಮೇಲ್ಕಾಣಿಸಿದ ತರಬೇತಿಗಳನ್ನು ನೀಡಲು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಮಂಡಿಸಲಾಗಿದೆ.

ಮುಂದುವರೆದು, ಆರ್‌ಪಿಎಲ್ ತರಬೇತಿ ನೀಡಲು ಆಯ್ಕೆಯಾದ 15 ಸಂಸ್ಥೆಗಳಲ್ಲಿ ಪ್ರಸ್ತುತ ತರಬೇತಿ ನೀಡಲು ಹಂಚಿಕೆ ಮಾಡುವ ಗುರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವ ಸಂಸ್ಥೆಗಳಿಗೆ ಹೆಚ್ಚಿನ ಗುರಿಯನ್ನು ನೀಡುವ ಕುರಿತು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಲ್ಲಿ RPL ತರಬೇತಿಗಳನ್ನು ನೀಡಲು ಸೂಚಿಸಿದರು. ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು ಕಾರ್ಮಿಕ ಇಲಾಖೆ ರವರು ಮಾತನಾಡುತ್ತಾ ಈಗಾಗಲೆ ಆರ್‌ಪಿಎಲ್ ಯೋಜನೆಯಡಿ ಆಯ್ಕೆಯಾದ ಸಂಸ್ಥೆಗಳಿಗೆ ನೀಡಿದ ಗುರಿಗಳನ್ನು ಅನುಷ್ಠಾನ ಮಾಡಿರುವ ಕುರಿತು ಸದರಿ ಸಂಸ್ಥೆಗಳು ನೀಡಿರುವ ತರಬೇತಿ ಕುರಿತು evaluation ಮಾಡಿ ನಂತರ ಹೆಚ್ಚಿನ ಗುರಿ ನೀಡಬಹುದೆಂದು ಅಭಿಪ್ರಾಯಿಸಿದರು.

ಮಾನ್ಯ ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ ಈಗಾಗಲೇ ಕೋವಿಡ್-19 ಹಿನ್ನಲೆಯಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಿಳಂಬವಾಗಿರುತ್ತದೆ. ಪ್ರಸ್ತುತ ಆರ್ಥಿಕ ವರ್ಷದಲ್ಲಿ ಮಂಡಳಿಯ ವತಿಯಿಂದ ಯಾವುದೇ ತರಬೇತಿಗಳನ್ನು ಹಮ್ಮಿಕೊಂಡಿರುವುದಿಲ್ಲ. ಆದ್ದರಿಂದ ಆರ್‌ಪಿಎಲ್ ಟೆಂಡರ್‌ನಲ್ಲಿ ಆಯ್ಕೆಯಾದ ಎಲ್ಲಾ 15 ಸಂಸ್ಥೆಗಳು ಬ್ಯಾಂಕ್ ಗ್ಯಾರಂಟಿಯನ್ನು ನೀಡಿದ ನಂತರ ನಿಯಮಾನುಸಾರ ಒಡಂಬಡಿಕೆ ಮಾಡಿಕೊಂಡು ಕಾರ್ಯಾದೇಶವನ್ನು ನೀಡಿ ಸದರಿ ಕಾರ್ಯಕ್ರಮವನ್ನು ತುರ್ತಾಗಿ ಅನುಷ್ಠಾನಗೊಳಿಸಲು ಸೂಚಿಸಿದರು ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿ ಸರ್ವಾನುಮತದಿಂದ ಅನುಮೋದಿಸಿದರು.

ಮುಂದುವರೆದು, ಆರ್‌ಪಿಎಲ್ ತರಬೇತಿ ನೀಡಲು ಆಯ್ಕೆಯಾದ 15 ಸಂಸ್ಥೆಗಳು ಶ್ರಮ ಸಾಮರ್ಥ್ಯ ಯೋಜನೆಯಡಿ ಕಟ್ಟಡ ಕಾರ್ಮಿಕರ ಅವಲಂಭಿತರಿಗೆ ನೀಡಲು ಇಚ್ಚಿಸಿರುವ ತರಬೇತಿಗಳನ್ನು ಒದಗಿಸಲು ಅರ್ಹರಿದ್ದಲ್ಲಿ ಸದರಿ ಸಂಸ್ಥೆಗಳ ಮೂಲಕ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ತರಬೇತಿಗಳನ್ನು ಕಟ್ಟಡ ಕಾರ್ಮಿಕರ ಅವಲಂಭಿತರಿಗೆ ನೀಡಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-18

**ಮಂಡಳಿಯ 2020-2021 ನೇ ಸಾಲಿನ ಆಯವ್ಯಯದಲ್ಲಿ 1 ಲಕ್ಷ ಅರ್ಹ ಕಟ್ಟಡ ಕಾರ್ಮಿಕರಿಗೆ ಉಚಿತ Prepaid Health Card ವಿತರಣೆ ಯೋಜನೆಯನ್ನು ಆಳವಡಿಸಿಕೊಂಡಿದ್ದು, ಸದರಿ ಯೋಜನೆಯನ್ನು ಕೈಬಿಡುವ ಕುರಿತು**

2020-21ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ-135 ರಲ್ಲಿ ಒಂದು ಲಕ್ಷ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬದ ಸದಸ್ಯರುಗಳಿಗೆ "ಮುಖ್ಯಮಂತ್ರಿಗಳ ಆರೋಗ್ಯ ಸುರಕ್ಷಾ" ಯೋಜನೆಯಡಿಯಲ್ಲಿ ಅನುಮೋದಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅನುವಾಗುವಂತೆ "ಉಚಿತ ಪ್ರಿಪೇಯ್ಡ್ ಹೆಲ್ತ್ ಕಾರ್ಡ್‌ಗಳನ್ನು ವಿತರಿಸಲಾಗುವುದು ಎಂದು ಘೋಷಣೆ ಮಾಡಲಾಗಿರುತ್ತದೆ.

ಈ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಕಾಇ 302 ಎಲ್‌ಇಟಿ 2020, ದಿನಾಂಕ:20-10-2020 ರಲ್ಲಿ ಉಚಿತ ಪ್ರಿಪೇಯ್ಡ್ ಹೆಲ್ತ್ ಕಾರ್ಡ್‌ಗಳನ್ನು ವಿತರಿಸುವ ಯೋಜನೆಯನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಇದಕ್ಕೆ ತಗಲುವ ಮೊತ್ತವನ್ನು ಮಂಡಳಿಯಿಂದಲೇ ಭರಿಸುವಂತೆ ಆದೇಶಿಸಲಾಗಿರುತ್ತದೆ.

ಈ ಸಂಬಂಧ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ವಿವಿಧ ವಿಮಾ ಕಂಪನಿಗಳ ಜೊತೆ ಚರ್ಚಿಸಲಾಯಿತು. ಆ ಸಂದರ್ಭದಲ್ಲಿ ಒಂದು ಕುಟುಂಬಕ್ಕೆ ವಾರ್ಷಿಕವಾಗಿ ಜಿಎಸ್‌ಟಿ ಸೇರಿ ರೂ.12,538/-ಗಳನ್ನು ವಿಮಾ ಮೊತ್ತವಾಗಿ ಮಂಡಳಿಯಿಂದ ಪಾವತಿಸಬೇಕಿರುತ್ತದೆ. ಒಂದು ಕುಟುಂಬಕ್ಕೆ ಅಂದರೆ ಗಂಡ, ಹೆಂಡತಿ ಮತ್ತು ಇಬ್ಬರು ಮಕ್ಕಳಿಗೆ ಮಾತ್ರ ವಾರ್ಷಿಕ ರೂ. 5.00 ಲಕ್ಷದವರೆಗೆ ಆರೋಗ್ಯ ವಿಮೆ ಪಡೆಯಲು ಅವಕಾಶವಿರುತ್ತದೆ. ಕುಟುಂಬದ ಇತರೆ ಸದಸ್ಯರುಗಳು ಈ ಸೌಲಭ್ಯದಿಂದ ವಂಚಿತರಾಗಲಿದ್ದಾರೆ. ಮಂಡಳಿಯಲ್ಲಿ ಇದುವರೆಗೂ ನೋಂದಣಿಯಾಗಿರುವ 28.89 ಲಕ್ಷ ಕಾರ್ಮಿಕರಿಗೂ ಈ ಯೋಜನೆಯನ್ನು ಜಾರಿಗೊಳಿಸಬೇಕಾದಲ್ಲಿ ಪ್ರತಿ ವರ್ಷ ರೂ.3622.00 ಕೋಟಿ ಮೊತ್ತ ಖರ್ಚಾಗಲಿದೆ. ಪ್ರಸ್ತುತ ಒಂದು ಲಕ್ಷ ಕಾರ್ಡ್ ವಿತರಿಸಲು ರೂ.125.00 ಕೋಟಿ ಖರ್ಚಾಗುತ್ತದೆ. ಆದರೆ ಮಂಡಳಿಯಲ್ಲಿ ಪ್ರತಿ ವರ್ಷ ರೂ. 4.00 ರಿಂದ 5.00 ಕೋಟಿ ಮಾತ್ರ ವೈದ್ಯಕೀಯ ಸೌಲಭ್ಯದ ಮರುಪಾವತಿ ಆಗುತ್ತಿರುವುದು ತಿಳಿದುಬಂದಿದೆ.

ಮಂಡಳಿಯಲ್ಲಿ ಪ್ರಸ್ತುತ ನೋಂದಾಯಿತ ಫಲಾನುಭವಿಗಳಿಗೆ ವೈದ್ಯಕೀಯ ಸಹಾಯಧನ ಮತ್ತು ಪ್ರಮುಖ ವೈದ್ಯಕೀಯ ವೆಚ್ಚ ಸಹಾಯ ಧನ ಸೌಲಭ್ಯಗಳು ಜಾರಿಯಲ್ಲಿರುತ್ತವೆ. ಅಲ್ಲದೇ, ಫಲಾನುಭವಿಗಳಿಗೆ ವೈದ್ಯಕೀಯ ನೆರವು ಒದಗಿಸುವ ಹಿನ್ನೆಲೆಯಲ್ಲಿ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಮತ್ತು Preventive Health Care ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಹೆಚ್ಚಿನ ಅನುದಾನದ ಅವಶ್ಯಕತೆಯಿರುವ ಉಚಿತ ಪ್ರಿಪೇಯ್ಡ್ ಹೆಲ್ತ್ ಕಾರ್ಡ್‌ಗಳನ್ನು ವಿತರಿಸುವ ಯೋಜನೆಯನ್ನು ಕೈಬಿಡಬಹುದಾಗಿರುತ್ತದೆಂದು ತಿಳಿಸುತ್ತಾ, ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ವೈದ್ಯಕೀಯ ಸೌಲಭ್ಯದ ಮರುಪಾವತಿ ಯೋಜನೆಯಡಿ ಪ್ರಸ್ತುತ ರೂ. 4.00 ರಿಂದ 5.00 ಕೋಟಿ ಮೊತ್ತ ಮಾತ್ರ ಖರ್ಚು ಆಗುತ್ತಿರುವುದರಿಂದ Preventive Health Care ಯೋಜನೆಯನ್ನು ಕೈಬಿಡುವುದು ಸೂಕ್ತ ಎಂದು ಸಭೆಗೆ ತಿಳಿಸಿದರು ಇದಕ್ಕೆ ಸದಸ್ಯರು ಒಪ್ಪಿ ಸದರಿ ಯೋಜನೆಯನ್ನು ಕೈಬಿಡಲು ಸರ್ವಾನುಮತದಿಂದ ಅನುಮೋದನೆ ನೀಡಿದರು.

## ವಿಷಯ ಸಂಖ್ಯೆ-19

**ಕಲ್ಯಾಣ ಸುರಕ್ಷಾ ಭವನದ 4ನೇ ಮಹಡಿಯಲ್ಲಿರುವ ಮಂಡಳಿಯ ಕೊಠಡಿಗಳನ್ನು ಮಾನ್ಯ ಅಧ್ಯಕ್ಷರು Karnataka Skill Development Authority ರವರು ನೀಡುವಂತೆ ಕೋರಿರುವ ಕುರಿತು**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಛೇರಿಯು ಕಲ್ಯಾಣ ಸುರಕ್ಷಾ ಭವನದಲ್ಲಿ 2016 ರಿಂದ ಕಾರ್ಯನಿರ್ವಹಿಸುತ್ತಿದ್ದು ಈ ಕಟ್ಟಡದಲ್ಲಿ ಮಂಡಳಿಯ ಕಛೇರಿಯಲ್ಲದೇ ಈ ಕೆಳಕಾಣಿಸಿದ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

(1) ಕರ್ನಾಟಕ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ.
(2) ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರದ ಕಛೇರಿ,
(3) ನಿರ್ದೇಶಕರು, ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ

(4) ಅಂತರಾಷ್ಟ್ರೀಯ ವಲಸೆ ಕೇಂದ್ರ – ಕರ್ನಾಟಕ

ಮಾನ್ಯ ಅಧ್ಯಕ್ಷರು Karnataka Skill Development Authority ರವರು ತಮ್ಮ ಕಛೇರಿಯ ಉಪಯೋಗಕ್ಕಾಗಿ ಮಂಡಳಿಯ ಕಟ್ಟಡವಾದ ಕಲ್ಯಾಣ ಸುರಕ್ಷಾ ಭವನದ 4ನೇ ಮಹಡಿಯಲ್ಲಿರುವ ಮಂಡಳಿಯ ಕೊಠಡಿಗಳನ್ನು ನೀಡಲು ಕೋರಿರುತ್ತಾರೆ.

ಮಂಡಳಿಯಿಂದ ಈಗಾಗಲೇ ಒದಗಿಸುತ್ತಿರುವ 19 ವಿವಿಧ ರೀತಿಯ ಕಲ್ಯಾಣ ಯೋಜನೆಗಳ ಸಹಿತ ಕಟ್ಟಡ ಕಾರ್ಮಿಕರ ಅನುಕೂಲಕ್ಕಾಗಿ ಇತರೆ ಹಲವಾರು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲು ಕಾರ್ಯಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಇದಲ್ಲದೆ ಮಂಡಳಿಯ ಅನುಮೋದಿತ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ 43 ಅಧಿಕಾರಿಗಳನ್ನು ನಿಯೋಜಿಸಿಕೊಳ್ಳಲು ಅವಕಾಶವಿರುತ್ತದೆ ಹಾಗೂ ಮಂಡಳಿಯಲ್ಲಿ 60 ಸಿಬ್ಬಂದಿಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಸ್ತುತ ಮಂಡಳಿಯಲ್ಲಿ 19 ಕೊಠಡಿಗಳು ಮಾತ್ರ ಅಧಿಕಾರಿಗಳಿಗೆ ಮತ್ತು ನಿರೀಕ್ಷಕರುಗಳಿಗೆ ಲಭ್ಯವಿದ್ದು, ಕಾರ್ಮಿಕ ಅಧಿಕಾರಿಗಳು ಮತ್ತು ನಿರೀಕ್ಷಕರುಗಳ ತಮ್ಮ ಕೊಠಡಿಗಳನ್ನು ಹಂಚಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇದ್ದಲ್ಲದೆ ಅನುಮೋದಿತ ಹುದ್ದೆಗಳಲ್ಲಿ 2 ಉಪ ಕಾರ್ಯದರ್ಶಿಗಳು ಹಾಗೂ 4 ಸಹಾಯಕ ಕಾರ್ಯದರ್ಶಿಗಳಿಗೆ ಕೊಠಡಿಗಳು ಲಭ್ಯವಿರುವುದಿಲ್ಲ ಹಾಗೂ ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಭಿಯಂತರರಿಗೆ ಇನ್ನೂ ಕೊಠಡಿಯನ್ನು ಒದಗಿಸಿರುವುದಿಲ್ಲ, ಮಂಡಳಿಯಲ್ಲಿ ಈಗಾಗಲೇ ಸ್ಥಳಾವಕಾಶದ ತೀವ್ರ ಕೊರತೆ ಇರುತ್ತದೆ. ಈ ಹಿನ್ನಲೆಯಲ್ಲಿ ಕಟ್ಟಡದ 4ನೇ ಮಹಡಿಯಲ್ಲಿರುವ ಸ್ಥಳವನ್ನು ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರಕ್ಕೆ ಬಿಟ್ಟುಕೊಟ್ಟಲ್ಲಿ ಮಂಡಳಿಯ ಕೆಲಸಕಾರ್ಯಗಳಿಗೆ ಸ್ಥಳದ ಅಭಾವವಿರುವುದರಿಂದ ತುಂಬಾ ತೊಂದರೆ ಉಂಟಾಗುವ ಸಂಭವವಿರುತ್ತದೆ.

ಮುಂದುವರೆದು, ಮಂಡಳಿಯ ವ್ಯಾಪ್ತಿ ವಿಸ್ತಾರಗೊಳ್ಳುತ್ತಿರುವುದರಿಂದ ಹೊಸ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಪೂರ್ಣ ಪ್ರಮಾಣದ ಅಧಿಕಾರಿ ಹಾಗೂ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಬೇಕಾಗಿರುವುದರಿಂದ, ಕರ್ನಾಟಕ ಕೌಶಲ್ಯಾಭಿವೃದ್ಧಿ ಪ್ರಾಧಿಕಾರದವರು ಕೇಳಿರುವ ಜಾಗವನ್ನು ನೀಡದೇ ಮಂಡಳಿಯ ಅಧೀನದಲ್ಲೆ ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕರ್ನಾಟಕ ಕೌಶಲ್ಯಾಭಿವೃದ್ಧಿ ಪ್ರಾಧಿಕಾರದವರು ಕೇಳಿರುವ ಜಾಗವನ್ನು ನೀಡದೆ ಮಂಡಳಿಯಲ್ಲಿ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಮಂಡಳಿಯ ಅಧೀನದಲ್ಲೆ ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಸದರಿ ಎಲ್ಲಾ ಸದಸ್ಯರು ತಮ್ಮ ಸಹಮತವನ್ನು ವ್ಯಕ್ತಪಡಿಸುತ್ತಾ ಮಂಡಳಿಯ ನಾಲ್ಕನೇ ಮಹಡಿಯಲ್ಲಿರುವ ಕಟ್ಟಡಗಳನ್ನು ಮಂಡಳಿಯ ಕಛೇರಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-20

**ಮಂಡಳಿಯ ಕಲ್ಯಾಣ ಸುರಕ್ಷಾ ಭವನದಲ್ಲಿ ಸೋಲಾರ್ ವಿದ್ಯುತ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಕುರಿತು**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಲ್ಯಾಣ ಸುರಕ್ಷಾ ಭವನವು ಬಹುಮಹಡಿ ಕಟ್ಟಡವಾಗಿದ್ದು 3,080 ಚ.ಮೀ ಗಳ ನಿವೇಶನದಲ್ಲಿ ಆರು ಮಹಡಿಗಳ (ಬೇಸ್‌ಮೆಂಟ್ ಪಾರ್ಕಿಂಗ್ ಸೇರಿದಂತೆ) ಕಟ್ಟಡದ ಒಟ್ಟು ವಿಸ್ತೀರ್ಣ 8810.00 ಚ.ಮೀ ಗಳು ಆಗುತ್ತದೆ.

ಸದರಿ ಕಟ್ಟಡದಲ್ಲಿ ಮಂಡಳಿ ಸೇರಿದಂತೆ ಇತರೆ ನಾಲ್ಕು ವಿವಿಧ ಮಂಡಳಿಗಳ ಕಛೇರಿಗಳು ಕಾರ್ಯನಿರ್ವಹಿಸುತ್ತಿರುತ್ತದೆ. ಪ್ರತಿ ತಿಂಗಳು ಸುಮಾರು 2.00 ಲಕ್ಷಗಳ ವಿದ್ಯುಚ್ಛಕ್ತಿ ಬಿಲ್‌ಗಳನ್ನು ಬೆಸ್ಕಾಂಗೆ ಪಾವತಿಸಲಾಗುತ್ತಿದೆ. ಪ್ರತಿ ವರ್ಷ ಸುಮಾರು ರೂ. 24.00 ಲಕ್ಷಗಳು ಆಗುತ್ತದೆ. ಸದರಿ ಕಛೇರಿಗಳಲ್ಲಿ ಬೆಳಗ್ಗೆ 10 ರಿಂದ ಸಂಜೆ 7 ಗಂಟೆಯವರೆಗೆ ಹೆಚ್ಚು ವಿದ್ಯುತ್ ಉಪಯೋಗಿಸಲಾಗುತ್ತಿದೆ.

ಮಂಡಳಿಯ ಮೇಲಂತಸ್ತಿನಲ್ಲಿ ಸೋಲಾರ್ ವಿದ್ಯುತ್‌ಛಕ್ತಿ ಉತ್ಪಾದನೆ (Roof –Top Solar Generation) ಮಾಡಿದಲ್ಲಿ ಮಂಡಳಿಯ ವತಿಯಿಂದ ಬೆಸ್ಕಾಂ ಇಲಾಖೆಗೆ ಪಾವತಿಸಲಾಗುತ್ತಿರುವ ವಿದ್ಯುತ್‌ಚಕ್ತಿ ಬಿಲ್‌ಗಳ ಮೊತ್ತವನ್ನು ಕಡಿತಗೊಳಿಸಿದಂತಾಗುತ್ತದೆ. ಅಲ್ಲದೇ, ಸದರಿ ಸೋಲಾರ್ ಪ್ಯಾನಲ್‌ಗಳು 25 ವರ್ಷಗಳವರೆಗೆ ಬಾಳಿಕೆ ಬರುವುದರಿಂದ ಮಿತವ್ಯಯವನ್ನು ಸಾಧಿಸಬಹುದಾಗಿದೆ. ಆದ್ದರಿಂದ ಮಂಡಳಿಯ ಮೇಲಂತಸ್ತಿನಲ್ಲಿ ಸೋಲಾರ್ ವಿದ್ಯುತ್‌ಛಕ್ತಿ ಉತ್ಪಾದನೆ (Roof –Top Solar Generation) ಯನ್ನು ಅಳವಡಿಸಲು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ಕಾರ್ಮಿಕ ಆಯುಕ್ತರು ಮಾತನಾಡುತ್ತಾ, ಕಾರ್ಮಿಕ ಭವನದ ಕಟ್ಟಡದ ಮೇಲಂತಸ್ತಿನಲ್ಲಿಯೂ ಸಹಾ** ಸೋಲಾರ್ ವಿದ್ಯುತ್‌ಛಕ್ತಿ ಉತ್ಪಾದನೆ (Roof –Top Solar Generation) ಯನ್ನು ಅಳವಡಿಸುವಂತೆ ಮಾನ್ಯ ಅಧ್ಯಕ್ಷರಿಗೆ ಕೋರಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ, ಕಲ್ಯಾಣ ಸುರಕ್ಷಾ ಭವನ ಮತ್ತು ಕಾರ್ಮಿಕ ಭವನದ ಮೇಲಂತಸ್ತಿನಲ್ಲಿ ಸೋಲಾರ್ ವಿದ್ಯುತ್‌ಛಕ್ತಿ ಉತ್ಪಾದನೆ (Roof –Top Solar Generation) ಯನ್ನು ಅಳವಡಿಸಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-21

**ಕೇಂದ್ರ ಕಲ್ಯಾಣ ಆಯುಕ್ತರ ಕಛೇರಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ Enforcement Officers ಗಳಿಗೆ ಕೇಂದ್ರ ಸರ್ಕಾರದ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಣಿ ಮಾಡುವ ಅಧಿಕಾರವನ್ನು ನೀಡುವ ಕುರಿತು**

ಕೇಂದ್ರ ಕಲ್ಯಾಣ ಆಯುಕ್ತರ ಕಛೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ Enforcement Officers ಗಳಿಗೆ ಕೇಂದ್ರ ಸರ್ಕಾರದ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಣಿ ಮಾಡುವ ಅಧಿಕಾರವನ್ನು ನೀಡುವಂತೆ ಕೇಂದ್ರ ಕಲ್ಯಾಣ ಆಯುಕ್ತರ ಪತ್ರ ಸಂಖ್ಯೆ: 26(14)23/worker/E2/17-18 date: 10-02-2021 ಕೋರಿರುತ್ತಾರೆ.

ಆದರೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ (ಆರ್‌ಇಸಿಎಸ್) ಕಾಯ್ದೆ 1996 ಹಾಗೂ ಕರ್ನಾಟಕ ನಿಯಮಗಳು 2006 ರನ್ವಯ ರಾಜ್ಯ ಸರ್ಕಾರವು ಕಾರ್ಮಿಕ ಇಲಾಖೆಯ ಕಾರ್ಮಿಕ ಅಧಿಕಾರಿಗಳು, ಹಿರಿಯ / ಕಾರ್ಮಿಕ ನಿರೀಕ್ಷಕರುಗಳು ಮತ್ತು ಬಿ.ಎಂ.ಆರ್.ಸಿ.ಎಲ್ ಸಂಸ್ಥೆಯ ಮುಖ್ಯ ಇಂಜಿನೀಯರ್‌ಗಳನ್ನು ಫಲಾನುಭವಿಗಳ ನೋಂದಣಾಧಿಕಾರಿಗಳನ್ನಾಗಿ ನೇಮಿಸಿರುತ್ತದೆ. ಆದಾಗ್ಯೂ ಕೇಂದ್ರ ಕಲ್ಯಾಣ ಆಯುಕ್ತರ ಕಛೇರಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ Enforcement Officers ಗಳಿಗೆ ಕೇಂದ್ರ ಸರ್ಕಾರದ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಾಯಿಸಲು ಅಧಿಕಾರ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿರುತ್ತದೆಂದು ಕಾರ್ಯದರ್ಶಿಯವರು ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸದರಿ ಅಂಶವನ್ನು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಯಿತು.

## ವಿಷಯ ಸಂಖ್ಯೆ-22

**ಮಂಡಳಿಯ ಫಲಾನುಭವಿಗಳಿಗೆ ನಿಗದಿತ ಅವಧಿಯಲ್ಲಿ ಸೌಲಭ್ಯಗಳನ್ನು ವಿತರಿಸಲು ಕೆನರಾ ಬ್ಯಾಂಕ್, ಹೊಂಬೆಗೌಡ ನಗರ, ಬೆಂಗಳೂರು ಇಲ್ಲಿ ಕಾರ್ಮಿಕ ಅಧಿಕಾರಿಗಳ ಹೆಸರಿಗೆ 41 ಬ್ಯಾಂಕ್ ಖಾತೆಗಳು, ಸಹಾಯಕ ಕಾರ್ಮಿಕ ಆಯುಕ್ತರ ಹೆಸರಿಗೆ 11 ಖಾತೆಗಳನ್ನು Zero Balance ಇರುವ ಶ್ಯಾಡೊ ಖಾತೆಗಳನ್ನು ತೆರೆದಿರುವ ಬಗ್ಗೆ ಅನುಮೋದನೆ ನೀಡುವ ಕುರಿತು**

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳಡಿ ಸಹಾಯಧನ ಮಂಜೂರು ಮಾಡಲು ಕ್ಷೇತ್ರಾಧಿಕಾರಿಗಳಿಗೆ ಅಧಿಕಾರ ಪ್ರತ್ಯೋಜನೆ ಮಾಡಲಾಗಿರುತ್ತದೆ. ಕೆನರಾ ಬ್ಯಾಂಕ್, ಹೊಂಬೇಗೌಡ ನಗರ ಶಾಖೆ, ಬೆಂಗಳೂರು ತೆರೆದಿರುವ 3 ಖಾತೆಗಳ ಯೋಜನಾವಾರು ಫಲಾನುಭವಿಗಳ ವಿವರಗಳನ್ನು ಒಳಗೊಂಡಂತೆ Authorization ಅನ್ನು ಸದರಿ ಬ್ಯಾಂಕಿಗೆ ಕಳುಹಿಸಿ

ಫಲಾನುಭವಿಗಳಿಗೆ ಸೌಲಭ್ಯಗಳನ್ನು ನೀಡಲು ಕ್ರಮವಹಿಸಲಾಗಿತ್ತು. ಸದರಿ ವ್ಯವಸ್ಥೆಯಲ್ಲಿ ಬ್ಯಾಂಕಿನಿಂದ ಪಾವತಿಸಿದ ಪಾಸ್‌ಶೀಟ್ ತೆರೆದು ಲೆಕ್ಕ ಸಮನ್ವಯ (Reconcile) ಮಾಡಲಾಗುತ್ತಿತ್ತು.

ಆದರೆ, ಅನುದಾನ ಪಾವತಿಸಿದ ನಂತರ ಪಾಸ್‌ಶೀಟ್ ಪಡೆದು ಲೆಕ್ಕ ಸಮನ್ವಯ (Reconcile) ಮಾಡುವುದು ಹಾಗೂ ಪಾವತಿಸಲು ವಿವರಗಳನ್ನು ಸಂಬಂಧಿಸಿದ ಜಿಲ್ಲೆಗಳಿಗೆ ಪೋಸ್ಟಿಂಗ್ ಮಾಡುವುದು ಕಷ್ಟಸಾಧ್ಯವಾಗುತ್ತಿರುವುದರಿಂದ ದಿನಾಂಕ: 05/10/2020 ರಿಂದ ಮಂಡಳಿಯ ಫಲಾನುಭವಿಗಳಿಗೆ ನಿಗದಿತ ಅವಧಿಯಲ್ಲಿ ಸೌಲಭ್ಯಗಳನ್ನು ವಿತರಿಸಲು ಕೆನರಾ ಬ್ಯಾಂಕ್, ಹೊಂಬೇಗೌಡನಗರ ಶಾಖೆ, ಬೆಂಗಳೂರು ಇಲ್ಲಿ ಸಹಾಯಕ ಕಾರ್ಮಿಕ ಅಧಿಕಾರಿಗಳ ಹೆಸರಿನಲ್ಲಿ-11 ಮತ್ತು ಕಾರ್ಮಿಕ ಅಧಿಕಾರಿಗಳ ಹೆಸರಿನಲ್ಲಿ-41 ಒಟ್ಟು 52 ಜೀರೋ ಬ್ಯಾಲೆನ್ಸ್ ಇರುವ Shadow ಅಕೌಂಟ್‌ಗಳನ್ನು ತೆರೆಯಲಾಗಿದೆ. ಇದರಿಂದ ಫಲಾನುಭವಿಗಳಿಗೆ ನಿಗದಿತ ಅವಧಿಯಲ್ಲಿ ಸೌಲಭ್ಯ ನೀಡಲು ಹಾಗೂ ಲೆಕ್ಕ ಸಮನ್ವಯ (Reconcile) ಮಾಡಲು ಸುಲಭ ಸಾಧ್ಯವಾಗುತ್ತಿದೆ. ಆದ್ದರಿಂದ ಕಾರ್ಮಿಕ ಅಧಿಕಾರಿಗಳ ಹೆಸರಿನಲ್ಲಿ ತೆರೆಯಲಾದ 41 ಬ್ಯಾಂಕ್ ಖಾತೆಗಳು ಮತ್ತು ಸಹಾಯಕ ಕಾರ್ಮಿಕ ಆಯುಕ್ತರ ಹೆಸರಿನಲ್ಲಿ ತೆರೆಯಲಾದ 11 Zero Balance ಇರುವ ಶ್ಯಾಡೊ ಬ್ಯಾಂಕ್ ಖಾತೆಗಳಿಗೆ ಘಟನೋತ್ತರ ಅನುಮೋದನೆ ನೀಡಲು ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ :**

**ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸದರಿ ಅಂಶವನ್ನು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ-23

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸಲು ಕೋರಿ ಸ್ವೀಕೃತವಾದ ಅರ್ಜಿಗಳ ಕುರಿತು**

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯು ಅನುಮೋದನೆ ನೀಡಿರುತ್ತದೆ. ಪ್ರಸ್ತುತ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಕೋರಿ 4 ಅರ್ಜಿಗಳು ಸ್ವೀಕೃತಗೊಂಡಿದ್ದು, ಅರ್ಜಿಗಳ ವಿವರ ಈ ಕೆಳಕಂಡಂತ್ತಿರುತ್ತದೆ.

| | | | | |
|---|---|---|---|---|
| 1 | ಸಹಾಯಕ ಕಾರ್ಮಿಕ ಆಯುಕ್ತರು ವಿಭಾಗ-3 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ಅಪಘಾತ್/ಸಿಆರ್-10/2020-21 | ಶ್ರೀ ಮುರಳಿ ಬಿನ್ ಕೃಷ್ಣಪ್ಪ (ಕಾರವಾರ) ಎಂಬುವವರು ಮೆ॥ ಉಮೇಶ ಬಿನ್ ಮುನಿರತ್ನಪ್ಪ ಬಿಲ್ಡಿಂಗ್, ಬರಗುರು ಗ್ರಾಮ, ತಾ॥ ಮಾಲೂರು ಜಿಲ್ಲೆ ಕೋಲಾರ ಇಲ್ಲಿ ಕಟ್ಟಡ ಮೇಲೆ ಗಾರೆ ಕೆಲಸವನ್ನು ಮಾಡುತ್ತಿದ್ದ ಸಮಯದಲ್ಲಿ ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಿಸ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. | ಶ್ರೀ ಮುರುಳಿ (ಕಾರವಾರ) |
| 2 | ಕಾರ್ಮಿಕ ನಿರೀಕ್ಷಕರು ಕೂಡ್ಲಿಗಿ ವೃತ್ತ ಕೂಡ್ಲಿಗಿ | ಸಂಖ್ಯೆ:ಕಕಾಮಂ/ಕಲ್ಯಾಣ/ಅಪಘಾತ್/ಸಿಆರ್-11/2020-21 | ಶ್ರೀ ಅಂಜಿನಪ್ಪ ಬಿನ್ ಮೂಗಪ್ಪ ಹುಣಸಿಕಟ್ಟೆ ಗ್ರಾಮ ಇವರು ಕೆಲಸ ಮಾಡುತ್ತಿರುವ ಹಳೆ ಮನೆಯ ಚಾವಣಿ ಕೆಡುವ (ಆಜಷುಹು) ಸಂದರ್ಭದಲ್ಲಿ ಅಪಘಾತಕ್ಕಿಡಾಗಿ ಸ್ಥಳದಲ್ಲೆ ಮರಣ ಹೊಂದಿರುತ್ತಾರೆ. | ಶ್ರೀ ಅಂಜಿನಪ್ಪ (ಬಳ್ಳಾರಿ) |

| | | | | |
|---|---|---|---|---|
| 3 | ಸಹಾಯಕ ಕಾರ್ಮಿಕ ಆಯುಕ್ತರು ವಿಭಾಗ-4 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ಅಪಘಾತ್/ಸಿಆರ್-12/2020-21 | ಶ್ರೀ ನಡಿಗಡ್ಡ ಚಿನ್ನ ಹಜರತ್ ಇವರು ಮೇ: ಆನಂದ್ ಕನ್ಸಟ್ರಕ್ಷನ್, ರಾಯಲ್ ಕೌಟಿನ್ ಹತ್ತಿರ, ಪರಪ್ಪನ ಅಗ್ರಹಾರ ವಿಲೇಜ್ ಬೆಂಗಳೂರು ಇಲ್ಲಿನ ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ 3ನೇ ಮಹಡಿಯಿಂದ ಕೆಳಗೆ ಬಿದ್ದು ಮೃತಪಟ್ಟಿರುತ್ತಾರೆ. | ಶ್ರೀ ನಡಿಗಡ್ಡ ಚಿನ್ನ ಹಜರತ್ (ಬೆಂಗಳೂರು) |
| 4 | ಕಾರ್ಮಿಕ ಅಧಿಕಾರಿ ಉಪ ವಿಭಾಗ-2 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ಅಪಘಾತ್/ಸಿಆರ್-13/2020-21 | ಶ್ರೀ ಅನ್ವರ್ ಹುಸೇನ್ ಬಿನ್ ಅಬ್ದುಲ್ ಅನ್ಸಾರಿ ಇವರು ಆನಂದ ಆಲ್‌ಫೈನ್, ಸರ್ವೆ ನಂ.4/4, 4/6 ಮತ್ತು 36, ಅಂಜನಾಪುರ ವಿಲೇಜ್, ಉತ್ತರಹಳ್ಳಿ ಹೋಬಳಿ, ಬೆಂಗಳೂರು ಈ ಕಟ್ಟಡದಲ್ಲಿ 6ನೇ ಮಹಡಿಯಲ್ಲಿ ಚಕ್ರ ಇರುವ ಎತ್ತರದ ಟೇಬಲ್ ಮೇಲೆ ನಿಂತುಕೊಂಡು ರೂಫಿಂಗ್ ಚಿಪ್ಪಿಂಗ್ ಕೆಲಸ ಮಾಡುವಾಗ ಆಯಾತಪ್ಪಿ ಕೆಳಗೆ ಬಿದ್ದು ಮೃತಪಟ್ಟಿರುತ್ತಾರೆ. | ಶ್ರೀ ಅನ್ವರ್ ಹುಸೇನ್ (ಬಿಹಾರ್) |

ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ಅನುಮೊದನೆಗೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಕಟ್ಟಡ ಅಪಘಾತದಿಂದಾಗಿ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರು ಅಪಘಾತದಲ್ಲಿ ಮೃತ ಹೊಂದಿದಲ್ಲಿ ಅವರ ಅವಲಂಭಿತರಿಗೆ ಪರಿಹಾರ ನೀಡುವುದಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಲ್‌ಡಿ 106 ಎಲ್‌ಇಟಿ 2019, ಬೆಂಗಳೂರು, ದಿನಾಂಕ 01-10-2019 ರಿಂದ ಜಾರಿಗೆ ಬರುವಂತೆ, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 14-11-2019 ರಂದು ಪ್ರಕಟವಾದ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಿಗೆ ಮರಣ ಸಹಾಯ ಧನ ಪಡೆಯುವ ಸಂಬಂಧ ಅವರ ಅವಲಂಭಿತ ಅರ್ಜಿದಾರರು ಅರ್ಜಿ ಸಲ್ಲಿಸಲು ನಮೂನೆ 21 ಬಿ ಅನ್ನು ನಿಯಮ 47ರ ಉಪ ನಿಯಮ 6 ರಡಿ ಅಳವಡಿಸಲಾಗಿರುತ್ತದೆ. ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅವಲಂಭಿತರಿಗೆ ರೂ.2.00 ಲಕ್ಷಗಳ ಮರಣ ಸಹಾಯಧನ ನೀಡಲು ಸರ್ವಾನುಮತದಿಂದ ಅನುಮೋದಿಸಲಾಯಿತು.

## ವಿಷಯ ಸಂಖ್ಯೆ-24

**ನೇರ ಗುತ್ತಿಗೆ ಆಧಾರದ ಮೇಲೆ ಲೆಕ್ಕ ಪತ್ರ ಶಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಕೌಂಟ್ಸ್ & ಆಡಿಟ್ ಅಡ್ವೈಸರ್ ಹಾಗೂ ಅಕೌಂಟ್ಸ್ & ಆಡಿಟ್ ಡೆಸ್ಕ್ ಆಫೀಸರ್ ಸೇವೆಯನ್ನು ಮುಂದುವರೆಸುವ ಬಗ್ಗೆ**

ಮಂಡಳಿಯ ಸಿ&ಆರ್ ರೂಲ್ ನಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಗೆ ಸಂಬಂಧಿಸಿದ ಉಪ ನಿಯಂತ್ರಕರು ಹುದ್ದೆ-1, ಸಹಾಯಕ ನಿಯಂತ್ರಕರ ಹುದ್ದೆ-2, ಲೆಕ್ಕ ಅಧೀಕ್ಷಕರು ಹುದ್ದೆ-2 ಮಂಜೂರಾಗಿರುತ್ತವೆ. ಆದರೆ, ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಸ್ಥಳ ನಿಯುಕ್ತಿಗೊಂಡಿರುವುದಿಲ್ಲ. ಸದರಿ ಹುದ್ದೆಗಳು ಖಾಲಿ ಇರುವುದರಿಂದ ಮಂಡಳಿಯ ಲೆಕ್ಕ ಪತ್ರಗಳನ್ನು ನಿರ್ವಹಿಸಲು ಕಷ್ಟ ಸಾಧ್ಯವಾಗಿರುತ್ತದೆ. ಆದ್ದರಿಂದ ನೇರ ಗುತ್ತಿಗೆ ಆಧಾರದ ಮೇಲೆ ಲೆಕ್ಕ ಪತ್ರ ಶಾಖೆಯಲ್ಲಿ ಕೆಲಸ ನಿರ್ವಹಿಸಲು ಶ್ರೀ. ದ್ಯಾವಯ್ಯ ಇವರನ್ನು ಅಕೌಂಟ್ಸ್ & ಆಡಿಟ್ ಅಡ್ವೈಸರ್ ಆಗಿ

ಹಾಗೂ ಶ್ರೀ. ರುದ್ರಪ್ಪ ಇವರನ್ನು ಅಕೌಂಟ್ಸ್ & ಆಡಿಟ್ ಡೆಸ್ಕ್ ಆಫಿಸರ್ ಆಗಿ ನೇರ ಗುತ್ತಿಗೆ ಆಧಾರದ ಮೇಲೆ ಈ ಹಿಂದೆ ನೇಮಕ ಮಾಡಿಕೊಳ್ಳಲಾಗಿರುತ್ತದೆ.

ದಿನಾಂಕ:26-02-2020ರ ಮಂಡಳಿಯಿಂದ ಹೊರಡಿಸಿದ ಆದೇಶದಲ್ಲಿ ಹೊಸದಾಗಿ ನಿಯಮಾನುಸಾರ ಸಂದರ್ಶನ ಮೂಲಕ ಭರ್ತಿ ಮಾಡಿಕೊಳ್ಳುವವರೆಗೆ ಸದರಿ ಅಧಿಕಾರಿಯವರ ಸೇವಾ ಅವಧಿಯನ್ನು ವಿಸ್ತರಿಸಲಾಗಿರುತ್ತದೆ. ಆದ್ದರಿಂದ ದಿನಾಂಕ 16-01-2020 ರಿಂದ ಅನ್ವಯಿಸಿ ಸದರಿಯವರ ಸೇವೆಯನ್ನು ಮುಂದುವರೆಸಿಕೊಂಡು ಬಂದಿದ್ದನ್ನು ಸಭೆಯ ಗಮನಕ್ಕೆ ತರುತ್ತಾ ಘಟನೋತ್ತರ ಅನುಮೋದನೆ ನೀಡಲು ಕೋರಿದರು ಮತ್ತು ಸದರಿಯವರುಗಳು ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿಯವರ ಸೇವೆಯನ್ನು ದಿನಾಂಕ:31-03-2022 ರವರೆಗೆ ಮುಂದುವರೆಸಲು ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಕಾರ್ಯದರ್ಶಿಯವರು ಮಂಡಿಸಿದರು.

ತೀರ್ಮಾನ:

**ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ** ದಿನಾಂಕ 16-01-2020 ರಿಂದ ಅನ್ವಯಿಸಿ ಸದರಿಯವರ ಸೇವೆಯನ್ನು ಮುಂದುವರೆಸಿದ್ದಕ್ಕೆ ಘಟನೋತ್ತರ ಅನುಮೋದನೆ ನೀಡುತ್ತಾ, **ಸದರಿಯವರ ಸೇವೆಯನ್ನು** ದಿನಾಂಕ:31-03-2021 ರವರೆಗೆ ಮುಂದುವರೆಸಲು **ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ-25

**ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಅಸಂಘಟಿತ ಕಾರ್ಮಿಕರ ಮಕ್ಕಳಿಗೆ ಸೇತು ಬಂಧ ಶಾಲೆಗಳನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಪ್ರಾರಂಭಿಸುವ ಕುರಿತು**

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ: 10096/2020 ಅನ್ನು LETSKITZ Foundation ರವರು ದಾಖಲಿಸಿದ್ದು, ಕಾರ್ಮಿಕ ಇಲಾಖೆಯು ಕೂಡ ಈ ರಿಟ್ ಅರ್ಜಿಯಲ್ಲಿ ಪ್ರತಿವಾದಿಯಾಗಿರುತ್ತದೆ. ಸದರಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ಬಗ್ಗೆ ಮಾನ್ಯ ನ್ಯಾಯಾಲಯವು ದಿನಾಂಕ 18-11-2020 ಮತ್ತು 30-11-2020 ರಂದು ಕೆಲವು ನಿರ್ದೇಶನಗಳನ್ನು ನೀಡಿರುತ್ತದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಕಾರ್ಮಿಕ ಇಲಾಖೆಗೆ ನೀಡಿದ ನಿರ್ದೇಶನದಂತೆ, ಕಟ್ಟಡ ಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರ ಮಕ್ಕಳಿಗೆ ಕಟ್ಟಡ ನಿರ್ಮಾಣ ಅಥವಾ ಪಾಲಕರ ಕೆಲಸದ ಸ್ಥಳಗಳಲ್ಲಿ ಪೋಷಣೆ ಮತ್ತು ಕಲಿಕಾ ಸೌಲಭ್ಯಗಳನ್ನು ಒದಗಿಸುವುದು ಅವಶ್ಯವಾಗಿರುತ್ತದೆ.

ಈ ಹಿನ್ನಲೆಯಲ್ಲಿ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಅಸಂಘಟಿತ ಕಾರ್ಮಿಕರ ಮಕ್ಕಳಿಗೆ 5 ವಸತಿ ಸೇತು ಬಂಧ ಶಾಲೆಗಳನ್ನು ರೂ.**2,05,90,000/-** ಮೊತ್ತದಲ್ಲಿ ಹಾಗೂ 10 ಸಂಚಾರಿ ಸೇತು ಬಂಧ ಶಾಲೆಗಳನ್ನು ರೂ.**3,03,60,000/-** ಮೊತ್ತದಲ್ಲಿ ಪ್ರಾರಂಭಿಸಲು ಉದ್ದೇಶಿಸಿ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಾತಿ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಸದರಿ ಸೇತು ಬಂದ ಶಾಲೆಗಳನ್ನು ಪ್ರಾರಂಭಿಸಲು ಹಾಗೂ ತಗಲುವ ವೆಚ್ಚವನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕರ್ನಾಟಕ ರಾಜ್ಯ

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಭರಿಸಲು ಉದ್ದೇಶಿಸಲಾಗಿದೆ. ಆದ್ದರಿಂದ ಸದರಿ ಯೋಜನೆಯನ್ನು ಪ್ರಾರಂಭಿಸಿ ಈ ಮಂಡಳಿಗೆ ತಗಲುವ ವೆಚ್ಚವನ್ನು ಮಂಡಳಿಯ ಸುಂಕ ನಿಧಿಯಿಂದ ಭರಿಸಲು ಸಭೆಯ ಅನುಮೋದನೆಗೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ರವರು ಮಾತನಾಡುತ್ತಾ 5 ವಸತಿ ಸೇತು ಬಂಧ ಶಾಲೆಗಳನ್ನು ಹಾಗೂ 10 ಸಂಚಾರಿ ಸೇತು ಬಂದ ಶಾಲೆಗಳನ್ನು ಪೈಲಟ್ ಆಗಿ ಪ್ರಾರಂಭಿಸಲು ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ, ಸದರಿ ಯೋಜನೆಯನ್ನು ಪ್ರಾರಂಭಿಸಿ ಈ ಮಂಡಳಿಗೆ ತಗಲುವ ವೆಚ್ಚವನ್ನು ಮಂಡಳಿಯ ಸುಂಕ ನಿಧಿಯಿಂದ ಭರಿಸಲು ಅನುಮೋದನೆ ನೀಡಲಾಯಿತು.

## ವಿಷಯ ಸಂಖ್ಯೆ-26

## ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಇತರೆ ವಿಷಯಗಳ ಚರ್ಚೆ

### ಹೆಚ್ಚುವರಿ ಕಾರ್ಯಸೂಚಿ-1

### ಮೊಬೈಲ್ ಕ್ಲಿನಿಕ್

2020-21ನೇ ರಾಜ್ಯ ಬಜೆಟ್‌ನಲ್ಲಿ 10 ಮೊಬೈಲ್ ಕ್ಲಿನಿಕ್ ಗಳನ್ನು ಪ್ರಾರಂಭಿಸಲು ಘೋಷಣೆ ಮಾಡಿದ್ದು ಈ ಸಂಬಂಧ ಸರ್ಕಾರವು ಮಂಡಳಿ ವತಿಯಿಂದ ಸದರಿ ಮೊಬೈಲ್ ಕ್ಲಿನಿಕ್‌ಗಳನ್ನು ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ: ಕಾಇ 303 ಎಲ್‌ಇಟಿ 2020 ದಿನಾಂಕ 22-10-2020 ರಲ್ಲಿ ಆದೇಶಿಸಿರುತ್ತದೆ. ಅದರಂತೆ, ಆರೋಗ್ಯ ಇಲಾಖೆಯಿಂದ ಈ ಹಿಂದೆ ಸ್ಥಾಪಿಸಿದ್ದ ಮೊಬೈಲ್ ಕ್ಲಿನಿಕ್‌ಗಳ ದರಗಳನ್ನು ಪಡೆಯಲಾಗಿರುತ್ತದೆ. ಅದರಂತೆ, ಒಂದು ಸಂಚಾರಿ ಆರೋಗ್ಯ ಕ್ಲಿನಿಕ್ ಅನ್ನು ಪ್ರಾರಂಭಿಸಲು ಪ್ರತಿ ಮಾಹೆಗೆ ರೂ.3,31,500/- ಗಳು ಖರ್ಚಾಗುವುದೆಂದು ತಿಳಿಸಿರುತ್ತಾರೆ. ಅದರನ್ವಯ ಬೆಳಗಾವಿ ಪ್ರಾದೇಶಿಕ ವ್ಯಾಪ್ತಿಯಲ್ಲಿ 03 ಸಂಚಾರಿ ಆರೋಗ್ಯ ಕ್ಲಿನಿಕ್ ಗಳನ್ನು ಒಟ್ಟು ರೂ.3.58 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ದಿನಾಂಕ 08-12-2020 ರಂದು ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಗೆ ಸರ್ಕಾರದ ಪತ್ರ ಸಂಖ್ಯೆ: ಕಾಇ 303 ಎಲ್‌ಇಟಿ 2020 ದಿನಾಂಕ 25-01-2021 ರಂದು ಅನುಮೋದನೆ ನೀಡಿರುತ್ತದೆ.

ಆದರೆ, ಮಂಡಳಿಯಿಂದ ಪ್ರಾರಂಭಿಸಲು ಇಚ್ಛಿಸಿರುವ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳು ಪ್ರಥಮ ಬಾರಿಗೆ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುತ್ತಿರುವುದರಿಂದ ಆರೋಗ್ಯ ಇಲಾಖೆಯಿಂದ ಪ್ರಾರಂಭಿಸಿರುವ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳ ಮಾದರಿಯನ್ನು ಅನುಸರಿಸುವುದರ ಜೊತೆಗೆ ಇನ್ನೂ ಹೆಚ್ಚಿನ ಅಂಶಗಳನ್ನು ಸೇರ್ಪಡಿಸಿ ಕೇಂದ್ರ ಕಛೇರಿಯಲ್ಲಿ ಜಿಪಿಎಸ್ ಮೂಲಕ ಟ್ರ್ಯಾಕಿಂಗ್ ಮಾಡುವ ತಂತ್ರಜ್ಞಾನ, ಎಂಐಎಸ್ ರಿಪೋರ್ಟಿಂಗ್ ಸಿಸ್ಟಮ್, ಬಯೋಮೆಟ್ರಿಕ್ ವ್ಯವಸ್ಥೆ ಮತ್ತು ಇತರೆ ಮಾಹಿತಿ ತಂತ್ರಜ್ಞಾನ ಅಳವಡಿಸಿಕೊಂಡು ಉತ್ತಮ ಗುಣಮಟ್ಟದಿಂದ ಕೂಡಿದ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಪ್ರಾರಂಭಿಸಲು ಈ ಎಲ್ಲಾ ವಿವರಗಳನ್ನು ಒಳಗೊಂಡಂತೆ ಇತ್ತೀಚಿನ ದರಗಳ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ದೃಢೀಕರಣ ಪಡೆದು ಮೊದಲ ಹಂತದಲ್ಲಿ 2 ವರ್ಷದ ಅವಧಿಗೆ ಟೆಂಡರ್ ಮೂಲಕ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ತದನಂತರ ಸದರಿ ಸಂಸ್ಥೆಯ ಸೇವೆಯ ತೃಪ್ತಿಕರ ಅನುಗುಣವಾಗಿ ಪ್ರತಿ ವರ್ಷ ಪ್ರತ್ಯೇಕ ಕಾರ್ಯಾದೇಶ ನೀಡಿ ಗರಿಷ್ಠ 3 ವರ್ಷಗಳ

ಅವಧಿಗೆ ಸೇವೆಯನ್ನು ಮುಂದುವರೆಸಲು ಅನುಮೋದನೆ ಕೋರಿ ಕಾರ್ಯದರ್ಶಿಯವರು ಸಭೆಗೆ ಮಂಡಿಸಿದರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮಾನ್ಯ ಸಚಿವರು ಹಾಗು ಅಧ್ಯಕ್ಷರು ಮಾತನಾಡುತ್ತಾ ಆರೋಗ್ಯ ಇಲಾಖೆ ರವರಿಂದ ಈ ಎಲ್ಲಾ ವಿವರಗಳನ್ನು ಒಳಗೊಂಡಂತೆ ಇತ್ತೀಚಿನ ದರಗಳ ಪಟ್ಟಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ದೃಢೀಕರಣ ಪಡೆದು ಮೊದಲ ಹಂತದಲ್ಲಿ 2 ವರ್ಷದ ಅವಧಿಗೆ ಟೆಂಡರ್ ಮೂಲಕ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ತದನಂತರ ಸದರಿ ಸಂಸ್ಥೆಯ ಸೇವೆಯ ತೃಪ್ತಿಕರ ಅನುಗುಣವಾಗಿ ಪ್ರತಿ ವರ್ಷ ಪ್ರತ್ಯೇಕ ಕಾರ್ಯಾದೇಶ ನೀಡಿ ಗರಿಷ್ಠ 3 ವರ್ಷಗಳ ಅವಧಿಗೆ ಸೇವೆಯನ್ನು ಮುಂದುವರೆಸಬಹುದಾಗಿದೆ ಎಂದು ತಿಳಿಸಿದರು. ಸದರಿ ಪ್ರಸ್ತಾವನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

## ಹೆಚ್ಚುವರಿ ಕಾರ್ಯಸೂಚಿ-2

**ಬೆಂಗಳೂರು ಪ್ರಾದೇಶಿಕ-1 ಕಲಬುರಗಿ ಹಾಗೂ ಬೆಳಗಾವಿ ಪ್ರಾದೇಶಿಕ ವ್ಯಾಪ್ತಿಯಲ್ಲಿ ಕಾರ್ಮಿಕ ಇಲಾಖೆ ಕಛೇರಿಗಳಿಗೆ ಕಂಪ್ಯೂಟರ್ ಪರಿಕರಗಳನ್ನು ಒದಗಿಸುವ ಕುರಿತು**

ಕಾರ್ಮಿಕ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ನಿರೀಕ್ಷಕರು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಅಧಿಕಾರಿಗಳು, ಸಹಾಯಕ ಕಾರ್ಮಿಕ ಆಯುಕ್ತರು, ಉಪ ಕಾರ್ಮಿಕ ಆಯುಕ್ತರುಗಳಿಗೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಕೆಲಸ ನಿರ್ವಹಿಸಲು 30ನೇ ಮಂಡಳಿ ಸಭೆಯ ತೀರ್ಮಾನದಂತೆ ಈ ಕೆಳಕಂಡ ಕೋಷ್ಟಕದಲ್ಲಿನ ಪ್ರಮಾಣದಂತೆ ಪ್ರಾದೇಶಿಕವಾರು ಖರೀದಿಸಿ ಒದಗಿಸಲು ಅನುಮೋದನೆ ನೀಡಲಾಗಿದೆ.

ಕೋಷ್ಟಕ-1

| ಕ್ರ.ಸಂ | ಕಛೇರಿಯ ಹೆಸರು | ಕಂಪ್ಯೂಟರ್ | ಯುಪಿಎಸ್ | ಸ್ಕ್ಯಾನರ್ ಒಳಗೊಂಡ ಪ್ರಿಂಟರ್ |
|---|---|---|---|---|
| 1 | ಉಪ ಕಾರ್ಮಿಕ ಆಯುಕ್ತರು, ಪ್ರಾದೇಶಿಕ-1, ಬೆಂಗಳೂರು | 17 | 17 | 17 |
| 2 | ಉಪ ಕಾರ್ಮಿಕ ಆಯುಕ್ತರು, ಪ್ರಾದೇಶಿಕ-2, ಬೆಂಗಳೂರು | 69 | 69 | 69 |
| 3 | ಉಪ ಕಾರ್ಮಿಕ ಆಯುಕ್ತರು, ಹಾಸನ ಪ್ರಾದೇಶಿಕ, ಹಾಸನ | 52 | 52 | 50 |
| 4 | ಉಪ ಕಾರ್ಮಿಕ ಆಯುಕ್ತರು, ಕಲಬುರಗಿ ಪ್ರಾದೇಶಿಕ, ಕಲಬುರಗಿ | 14 | 14 | 39 |
| **ಒಟ್ಟು** | | **152** | **152** | **175** |

ಆದರೆ, ಮಾನ್ಯ ಕಾರ್ಮಿಕ ಆಯುಕ್ತರು ಕಲಬುರಗಿ ಪ್ರಾದೇಶಿಕ ಹಾಗೂ ಬೆಂಗಳೂರು ಪ್ರಾದೇಶಿಕ-1 ಕ್ಕೆ ಹೆಚ್ಚುವರಿಯಾಗಿ ಕಂಪ್ಯೂಟರ್ ಪರಿಕರಗಳನ್ನು ಒದಗಿಸಲು ಪರಿಷ್ಕೃತ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಹಾಗೂ ಬೆಳಗಾವಿ ಪ್ರಾದೇಶಿಕಕ್ಕೆ ಹೊಸದಾಗಿ ಕಂಪ್ಯೂಟರ್ ಹಾಗೂ ಇತರೆ ಉಪರಕರಗಳನ್ನು ಪೂರೈಕೆ ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಸಾಮಾಗ್ರಿಗಳನ್ನು ಸಂಬಂಧಿಸಿದ ಕಾರ್ಯಾಲಯಗಳಿಗೆ ತುರ್ತಾಗಿ ಸರಬರಾಜು ಮಾಡಲು ಮಾನ್ಯ ಅಧ್ಯಕ್ಷರು ತಿಳಿಸಿದಂತೆ ಮುಂದಿನ ಸಭೆಯ ಘಟನೋತ್ತರ ಅನುಮೋದನೆ ಮೇರೆಗೆ ಸದರಿ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಕಿಯೋನಿಕ್ಸ್ ಸಂಸ್ಥೆಯವರಿಗೆ ಕೋರಲಾಗಿರುತ್ತದೆ. ಆದ್ದರಿಂದ ಈ ಕೆಳಕಾಣಿಸಿದ

ಕೋಷ್ಟಕದಲ್ಲಿ ನಮೂದಿಸಿರುವ ಸಾಮಾಗ್ರಿಗಳಿಗೆ ಘಟನೋತ್ತರ ಮಂಜೂರಾತಿ ನೀಡಲು ಕಾರ್ಯದರ್ಶಿಯವರು ಸಭೆಯಲ್ಲಿ ಕೋರಿದರು.

ಕೋಷ್ಟಕ-2

| ಕ್ರ.ಸಂ | ಕಛೇರಿಯ ಹೆಸರು | ಕಂಪ್ಯೂಟರ್ | ಯುಪಿಎಸ್ | ಸ್ಕ್ಯಾನರ್ ಒಳಗೊಂಡ ಪ್ರಿಂಟರ್ |
|---|---|---|---|---|
| 1 | ಉಪ ಕಾರ್ಮಿಕ ಆಯುಕ್ತರು ಪ್ರಾದೇಶಿಕ-1 ಬೆಂಗಳೂರು | 70 | 70 | 70 |
| 2 | ಉಪ ಕಾರ್ಮಿಕ ಆಯುಕ್ತರು ಪ್ರಾದೇಶಿಕ-2 ಬೆಂಗಳೂರು | 69 | 69 | 69 |
| 3 | ಉಪ ಕಾರ್ಮಿಕ ಆಯುಕ್ತರು ಪ್ರಾದೇಶಿಕ ಹಾಸನ | 52 | 52 | 50 |
| 4 | ಉಪ ಕಾರ್ಮಿಕ ಆಯುಕ್ತರು ಪ್ರಾದೇಶಿಕ ಕಲಬುರಗಿ | 91 | 68 | 78 |
| 5 | ಉಪ ಕಾರ್ಮಿಕ ಆಯುಕ್ತರು ಪ್ರಾದೇಶಿಕ ಬೆಳಗಾವಿ | 80 | 80 | 80 |
| ಒಟ್ಟು | | 362 | 339 | 347 |
| 30ನೇ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡ ಪರಿಕರಣಗಳು | | 152 | 152 | 175 |
| ಉಳಿದ ಪರಿಕರಣಗಳಿಗೆ ಘಟನೋತ್ತರ ಅನುಮೋದನೆಗೆ | | 210 | 187 | 172 |

ಮುಂದುವರೆದು, ಸದರಿ ಕಂಪ್ಯೂಟರ್‌ಗಳಿಗೆ ಕಂಪ್ಯೂಟರ್ ಟೇಬಲ್‌ಗಳು ಮತ್ತು ಚೇರ್‌ಗಳನ್ನು ಹಾಗೂ ವಿವಿಧ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ 2ಕೆವಿ ಯುಪಿಎಸ್ ಅನ್ನು ಮಂಡಳಿಯಿಂದ ಖರೀದಿಸಿ ಸರಬರಾಜು ಮಾಡಿದಲ್ಲಿ ಸದರಿ ಕಛೇರಿಗಳ ಕಾರ್ಯನಿರ್ವಹಣೆ ಸುಲಭವಾಗಿ ಜರುಗಿಸಲು ಅನುಕೂಲ ಮಾಡಿದಂತಾಗುತ್ತದೆ ಎಂದು ಸಭೆಯಲ್ಲಿ ಹಾಜರಿದ್ದ ಕಾರ್ಮಿಕ ಆಯುಕ್ತರು ಸಭೆಯ ಗಮನಕ್ಕೆ ತರುತ್ತಾ, ಅವಶ್ಯಕತೆ ಇರುವ ಪೀಠೋಪಕರಣಗಳನ್ನು ಮಂಡಳಿಯಿಂದ ಖರೀದಿಸಿ ವಿವಿಧ ಕಾರ್ಮಿಕ ಕಛೇರಿಗಳಿಗೆ ಸರಬರಾಜು ಮಾಡಲು ಅನುಮೋದನೆ ನೀಡುವಂತೆ ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು.

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಕಲಬುರಗಿ ಪ್ರಾದೇಶಿಕ ಹಾಗೂ ಬೆಂಗಳೂರು ಪ್ರಾದೇಶಿಕ-1 ಕ್ಕೆ ಹೆಚ್ಚುವರಿ ಕಂಪ್ಯೂಟರ್ ಮತ್ತು ಇತರೆ ಪರಿಕರಗಳನ್ನು ಸರಬರಾಜು ಮಾಡಲು ಮೆ: ಕಿಯೋನಿಕ್ಸ್ ಸಂಸ್ಥೆಯವರಿಗೆ ನೀಡಿದ ಕಾರ್ಯಾದೇಶಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. ಅದೇ ರೀತಿ, ಬೆಳಗಾವಿ ಪ್ರಾದೇಶಿಕಕ್ಕೆ ಹೊಸದಾಗಿ ಕಂಪ್ಯೂಟರ್ ಹಾಗೂ ಇತರೆ ಉಪರಕರಗಳನ್ನು ಪೂರೈಕೆ ಮಾಡಲು ಮೆ: ಕಿಯೋನಿಕ್ಸ್ ಸಂಸ್ಥೆಯವರಿಗೆ ನೀಡಿದ ಕಾರ್ಯಾದೇಶಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. ಮುಂದುವರೆದು, ಸದರಿ ಕಾರ್ಯಾಲಯಗಳಿಗೆ ಹೆಚ್ಚುವರಿಯಾಗಿ ಕಂಪ್ಯೂಟರ್, ಪ್ರಿಂಟರ್ ಮತ್ತು ಯುಪಿಎಸ್‌ಗಳ ಅವಶ್ಯಕತೆಯಿದ್ದಲ್ಲಿ ನಿಯಮಾನುಸಾರ ಖರೀದಿಸಿ ಸರಬರಾಜು ಮಾಡಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

ಮುಂದುವರೆದು, ಕಾರ್ಮಿಕ ಆಯುಕ್ತರು ಕೋರಿರುವಂತೆ, ಕಂಪ್ಯೂಟರ್ ಟೇಬಲ್‌ಗಳು, ಚೇರ್‌ಗಳು ಹಾಗೂ ಅವಶ್ಯಕತೆ ಇರುವ ಪೀಠೋಪಕರಣಗಳನ್ನು ಮತ್ತು ವಿವಿಧ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ 2ಕೆವಿ ಯುಪಿಎಸ್ ಅನ್ನು ಮಂಡಳಿಯಿಂದ ಖರೀದಿಸಿ ಸರಬರಾಜು ಮಾಡಲು ಒಪ್ಪಿ ತೀರ್ಮಾನಿಸಲಾಯಿತು.

## ಹೆಚ್ಚುವರಿ ಕಾರ್ಯಸೂಚಿ-3

**ಕಾರ್ಮಿಕ ಆಯುಕ್ತರಿಗೆ, ಮಂಡಳಿಗೆ ಹಾಗೂ ಕಾರ್ಮಿಕ ಇಲಾಖೆಯ ಪ್ರಾದೇಶಿಕ ಮಟ್ಟದ ಉಪ ಕಾರ್ಮಿಕ ಆಯುಕ್ತರುಗಳಿಗೆ ಹೊಸ ಇನ್ನೋವಾ ವಾಹನವನ್ನು ಖರೀದಿಸುವ ಕುರಿತು**

ಮಂಡಳಿಯ 30ನೇ ಸಭೆಯಲ್ಲಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರು ಕೂಡ ಮಂಡಳಿಯ ಕೆಲಸ ಕಾರ್ಯಗಳು ಹಾಗೂ ಪ್ರಾದೇಶಿಕವಾರು ತಪಾಸಣೆ ನಡೆಸುತ್ತಿರುವ ಕಾರಣ ಅವರ ಕಛೇರಿಗಳಿಗೆ ಬಾಡಿಗೆ ಆದಾರದ ಮೇಲೆ ಇನ್ನೋವಾ ವಾಹನವನ್ನು ಒದಗಿಸಲು ತೀರ್ಮಾನಿಸಲಾಗಿರುತ್ತದೆ. ಸದರಿ ತೀರ್ಮಾನದಂತೆ ಬಾಡಿಗೆ ಆದಾರದ ಮೇಲೆ ಇನ್ನೋವಾ ವಾಹನವನ್ನು ಉಪ ಕಾರ್ಮಿಕ ಆಯುಕ್ತರುಗಳು ಪಡೆದು ಮಂಡಳಿಗೆ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ ವೆಚ್ಚವನ್ನು ಮಂಡಳಿಯಿಂದ ಭರಿಸಲಾಗುತ್ತದೆಂದು ಕಾರ್ಮಿಕ ಆಯುಕ್ತರಿಗೆ ಪತ್ರವನ್ನು ಬರೆಯಲಾಗಿರುತ್ತದೆ. ಆದರೆ ಸರ್ಕಾರದ ನಿಯಮಗಳನ್ವಯ ಮಾಸಿಕ ಗರಿಷ್ಠ ರೂ.30,000/- ಗಳಿಗೆ ಇನ್ನೋವಾ ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಸಾಧ್ಯವಿರುವುದಿಲ್ಲವೆಂದು ಕಾರ್ಮಿಕ ಆಯುಕ್ತರು ಸಭೆಗೆ ತಿಳಿಸಿದರು.

ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಉಪ ಕಾರ್ಮಿಕ ಆಯುಕ್ತರ ವ್ಯಾಪ್ತಿಯು ವಿಶಾಲವಾಗಿರುವುದರಿಂದ ಅವರಿಗೆ ಸುಸಜ್ಜಿತವಾದ ವಾಹನವನ್ನು ಒದಗಿಸುವುದು ಅವಶ್ಯಕವೆಂದು ಮಂಡಳಿಯ ಅಧ್ಯಕ್ಷರು ತಿಳಿಸಿದರು. ಈ ಹಿನ್ನಲೆಯಲ್ಲಿ ಕಾರ್ಮಿಕ ಇಲಾಖೆಯ 5 ಉಪ ಕಾರ್ಮಿಕ ಆಯುಕ್ತರುಗಳಿಗೆ ಹಾಗೂ ಕಾರ್ಮಿಕ ಆಯುಕ್ತರಿಗೆ ಮತ್ತು ಮಂಡಳಿಗೆ ತಲಾ ಒಂದರಂತೆ ಹೊಸದಾಗಿ ಒಟ್ಟು 07 ಇನ್ನೋವಾ ವಾಹನಗಳನ್ನು ಕಾರ್ಮಿಕ ಇಲಾಖೆಯಿಂದ ಖರೀದಿಸಲು ಹಾಗೂ 07 ಇನ್ನೋವಾ ವಾಹನಗಳಿಗೆ ತಗಲುವ ಬಿಲ್ಲಿನ ಮೊತ್ತವನ್ನು ಮಂಡಳಿಯಿಂದ ಭರಿಸಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

## ಹೆಚ್ಚುವರಿ ಕಾರ್ಯಸೂಚಿ-4

**ಮಂಡಳಿಯಿಂದ ಕೈಗೊಳ್ಳುವ ವಿವಿಧ ಕಾಮಗಾರಿಗಳ ಮತ್ತು ಸೇವಾ ಸರಕುಗಳ ಅಂದಾಜು ಪಟ್ಟಿಗಳಿಗೆ ಆಡಳತಾತ್ಮಕ ಅನುಮೋದನೆ ನೀಡುವುದು ಮತ್ತು ಟೆಂಡರ್‌ಗಳ ಅನುಮೋದನೆಗಾಗಿ ಆರ್ಥಿಕ ಮತ್ತು ತಾಂತ್ರಿಕ ಅಧಿಕಾರವನ್ನು ಪ್ರತ್ಯಾಯೋಜಿಸುವ ಬಗ್ಗೆ.**

ಮಂಡಳಿ ವತಿಯಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳು ಮತ್ತು ಕಟ್ಟಡ ಕಾರ್ಮಿಕರಿಗೆ ವಿವಿಧ ಬಗೆಯ ಟೂಲ್‌ಕಿಟ್‌ಗಳನ್ನು ಮತ್ತು ಇತರೆ ಸಾಮಾಗ್ರಿಗಳನ್ನು ಟೆಂಡರ್ ಮೂಲಕ ಖರೀದಿಸಿ ಸರಬರಾಜು ಮಾಡಲು ಕ್ರಮವಹಿಸಲಾಗುತ್ತಿದೆ. ಈಗಾಗಲೇ ಸರ್ಕಾರದಿಂದ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಟೆಂಡರ್ ಪರಿಶೀಲನಾ ಸಮಿತಿ, ಟೆಂಡರ್ ಸ್ವೀಕರಿಸುವ ಪ್ರಾಧಿಕಾರ ಮತ್ತು ಮೇಲ್ಮನವಿ

ಪ್ರಾಧಿಕಾರವನ್ನು ರಚಿಸಿ ಆದೇಶಿಸಲಾಗಿರುತ್ತದೆ. ಸದರಿ ಯೋಜನೆಗಳನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಸಬೇಕಾಗಿರುವುದರಿಂದ ಸರ್ಕಾರದಿಂದ ಆಡಳತಾತ್ಮಕ ಅನುಮೋದನೆ ಪಡೆದ ಪ್ರಕರಣಗಳಲ್ಲಿ ಸದರಿ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಮಂಜೂರಾತಿ ಪಡೆಯುವಲ್ಲಿ ಹಾಗೂ ಟೆಂಡರ್‌ಗಳ ಅನುಮೋದನೆಯ ಪ್ರಕ್ರಿಯೆಯಲ್ಲಿ ವಿಳಂಭವಾಗುವುದನ್ನು ತಡೆಗಟ್ಟಲು ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ:ಕಾಇ 51 ಎಲ್‌ಇಟಿ 2018, ದಿನಾಂಕ:16-10-2019 ರಂತೆ ರಚಿಸಲಾದ ಪ್ರಾಧಿಕಾರಗಳಿಗೆ ಸದರಿ ಆದೇಶ ಹೊರಡಿಸಿದ ದಿನಾಂಕದಿಂದ ಪೂರ್ವಾನ್ವಯವಾಗುವಂತೆ ಈ ಕೆಳಕಂಡಂತೆ ಅಧಿಕಾರವನ್ನು ಪ್ರತ್ಯೋಜಿಸಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

1. Technical Sanction Powers to Estimates & DTS.

| **Powers to accord Technical Sanction** | | | |
|---|---|---|---|
| AEE | EE | SE | CE |
| Less than and equal to Rs.100 Lakhs | Greater than Rs.100 Lakhs and Less than or equal to Rs.500 Lakhs | Greater than Rs.500 Lakhs and Less than or equal to Rs.1000 Lakhs | Greater than Rs.1000 Lakhs |

2. Tender Approval Powers.

| **Tender Premium Limit** | **Less than or equal to Rs.1000 Lakhs (In cases where administrative approval has been received by the Government)** | **Greater than Rs.1000 Lakhs** |
|---|---|---|
| Less than or equal to 5% | CEO and Secretary of the Board | Government |
| Greater than 5% and Less than or equal to 10% | Government | Government |

ಮೇಲೆ ವಿವರಿಸಿದ ಅಧಿಕಾರ ಪ್ರತ್ಯಾಯೋಜನೆ ಮಾಡಿದ ವಿವಿಧ ಪ್ರಾಧಿಕಾರಗಳಿಂದ ಅನುಮೋದನೆಗಳನ್ನು ಪಡೆದುಕೊಂಡು ಮಂಡಳಯ ವತಿಯಿಂದ ಅನುಷ್ಠಾನಗೊಳಸುತ್ತಿರುವ ವಿವಿಧ ಯೋಜನೆಗಳನ್ನು ಕಾಲಮಿತಿಯಲ್ಲಿ ಹಾಗೂ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಲು ತೀರ್ಮಾನಿಸಲಾಯಿತು.

(ಅರಬೈಲ್ ಶಿವರಾಂ ಹೆಬ್ಬಾರ್)
ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ
ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ
ಕಾರ್ಮಿಕರ ಕಲ್ಯಾಣ ಮಂಡಳ